UNIVERSAL LIBRARY
OU_198342
UNIVERSAL LIBRARY

ರಂಗಮಂಗ ರಂಜನೋದ್ಯಾನ

ಗೊಂಚಲು

೩

# ತಾಪತ್ರಯ

(ಸಂಕಲನ)

'ಜೋಕೆ'

ರಂಗಮಂಗ ಪ್ರಕಾಶನ :

ಧಾರವಾಡ

ಮುದ್ರಕರು :
ಎನ್. ಎ. ಹೊಸಕೇರಿ
ವಿಜಯ ಮುದ್ರಾಲಯ,
ಧಾರವಾಡ

ಪ್ರಕಾಶಕರು :
ಎಚ್. ಎಸ್. ಪಾಟೀಲ
ರಂಗಮಂಗ ಪ್ರಕಾಶನ:
ಚಿತ್ರಗಾರ ಓಣಿ,
ಧಾರವಾಡ

( ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. )

೧೯೪೦

ಮುಂದಿನ ಗೊಂಚಲು :
ಮೊರಬ ರಘುನಾಥರ
'ಕನ್ನಡಿ'
( ಆತ್ಮಕಥನಗಳು )

# ಜೋಕೆ !

ಜೋಕೆ ಎಂದಕೂಡಲೆ ಬೆದರಬೇಕಿಲ್ಲ. ‹ಜೋಕೆ›–ಜೋಶಿ ಕೇಶವ ರಾಯರು, ‹ ತಾಪತ್ರಯ › ವನ್ನು ಬರೆದು ನಿಮಗೆ ತಾಪವನ್ನು ಕೊಡ ಬೇಕೆಂದೂ ಅಲ್ಲ. ಮುನ್ನುಡಿಯನ್ನು ಬರೆದು ನಾನು ಓದುಗರಿಗೆ ಹೆಚ್ಚಿನ ತಾಪ ಕೊಡಬೇಕೆಂದೂ ನನ್ನ ಇಚ್ಛೆ ಇಲ್ಲ. ತಲೆ ಬರೆಹವನ್ನು ಓದಿದ ಕೂಡಲೆ, ಈ ಸಂಗ್ರಹದಲ್ಲಿ ಬರೀ ತಾಪಗಳು ತುಂಬಿವೆ ಎಂದು ಹೊಳೆಯದಿರಲಾರದು. ‹ ಆಗ–ಈಗ › ಎಂಬ ಕತೆಯಲ್ಲಿಯ ಬಯ ಸಿದ ಹೆಣ್ಣು ಸಿಕ್ಕದಿರುವ ತಾಪ; ‹ ನಾಟಕದ ಹಾಡಿ › ನಲ್ಲಿಯ ನರಸಿಂಹನಿಗೆ ತನ್ನ ಪ್ರಯತ್ನದ ವಿಪರೀತ ಪ್ರತಿಫಲ ದೊರಕಿದುದರ ತಾಪ; ‹ ತಾಪತ್ರಯ › ದಲ್ಲಿಯ ಸಮಾಜದ ಕಾಲ್ತೊಡಕಿನ ತಾಪ; ಅದರಂತೆಯೆ ‘ ಆಶೀರ್ವಾದ › ದಲ್ಲಿಯ ಪ್ರಯತ್ನಪಟ್ಟರೂ ತಕ್ಕ ಫಲ ದೊರಕದಿರುವ ತಾಪ; ಇವೆಲ್ಲ ತಾಪಗಳು ಜೀವನಬಿಟ್ಟು ಹೊರತಾ ಗಿಲ್ಲ; ಜೀವನವನ್ನು ಮರೆಯಿಸುವಂತಿವೆ. ಶ್ರೀ ಜೋಶಿ ಕೇಶವ ರಾಯರು ಜೀವನವನ್ನು ಇಡಿಯಾಗಿ ಬೆದಕುನೋಟದಿಂದ ನೋಡಿ, ಅದನ್ನೆ ಅನೇಕ ತರಹದ ಬಣ್ಣದಿಂದ ಚಿತ್ರಿಸಿದ್ದಾರೆ.

ಶ್ರೀ ಜೋಶಿಯವರದು ಮಾತಿನಶೈಲಿ, ಮಾತನಾಡಿದಂತೆ ಶೈಲಿ. ಓದುಗರನ್ನು ತಮ್ಮ ಪಕ್ಕದಲ್ಲಿಯೆ ಕುಳ್ಳಿರಿಸಿಕೊಂಡು ಮಾತನಾಡು ವಂತಿದೆ ಇವರ ಶೈಲಿ. ಕತೆಯು ಕೇಳುವದಕ್ಕಾಗಿ; ಓದುವುದಾದರೆ, ಇದಿರುಕುಳಿತು ಕೇಳುವಂತೆ ಶೈಲಿ ಇರಬೇಕಲ್ಲವೆ? ಇಂತಹ ಶೈಲಿಯೆ ಕತೆಹರಟೆಗಳ ಜೀವಾಳವಾಗಿದೆ.

ಶ್ರೀ ಜೋಶಿಯವರು ತುಂಬ ಹುರುಪಿನವರು; ಸ್ವತಃ ನಟರು. ವೈತುಂಬ ಕೆಲಸವಿದ್ದರೂ ಕೂಡ, ಸಾಹಿತ್ಯಸೇವೆಗಾಗಿ ಬಿಡುವು ದೊರಕಿಸಿ, ಇಂತಹ ಹೊತ್ತಿಗೆಯನ್ನು ಹೊರಡಿಸಿದುದು ಹೆಮ್ಮೆಯ ಮಾತಾಗಿದೆ.

ಧಾರವಾಡ
ಮಂಗಳವಾರಪೇಟೆ

**ಮೊರಬ ರಘುನಾಥ**

# ‘ ಇಂದಿನ ಹುಚ್ಚು ’

ಮನೆಯವರಿಗೆ ಬೇಡವಾಗಿ, ಮನಸ್ಸಿಗೆ ಬೇಕಾಗಿ, ಮದುವೆಯ ಗೊಂದಲದಲ್ಲಿ ಬಿದ್ದು, ನೋಡಿ ಬಂದು, ಮನ ಒಪ್ಪಿ ಮದುವೆಯಾಗದ ಕನ್ಯೆಯನ್ನು ನೆನೆದು, ಹುಚ್ಚುತನವೆಂದು ಅಂದು ನಾನು ಬರೆದದ್ದು ಮೊದಲನೆಯ ಬರಹವನ್ನು. ಅದನ್ನು ಬರೆಯುವಾಗ, ಬರೆದ ನಂತರ ನನಗೆ ಸ್ವಪ್ನದಲ್ಲಿಯೂ ಕೂಡ ನನ್ನ ಹುಚ್ಚಾಟಗಳ ಸಂಕಲನೆಯೊಂದು ಹೊರಬೀಳಬಹುದು ಎಂಬ ಕಲ್ಪನೆ ಕೂಡ ಇರಲಿಲ್ಲ. ಮುಂದೆ ಮಿತ್ರರ ಮಾತಿನಿಂದ ಸ್ಫೂರ್ತಿಗೊಂಡು ಬರೆದವುಗಳು ಕೆಲವು. ನನ್ನ ಬರಹಗಳನ್ನು ಹಲಕೆಲವರ ಮುಂದೆ ಓದಿ ತೋರಿಸಿದ್ದೆ. ಅವರು ಹೀಗೆ ಬರೆಯುತ್ತಾ ಹೋಗು ಎಂದರೆ ನಿನಗೆ ಬರವಣಿಗೆಯು ಸಾಧಿಸುವದು ಎಂದು ಹೇಳಿದರು. ಹೊಟ್ಟೆ ಹೊರೆದುಕೊಳ್ಳುವದಕ್ಕಾಗಿ ಮನಒಪ್ಪುವ ಕೆಲಸವನ್ನು ಮಾಡುತ್ತಿದ್ದ ನನಗೆ ಬರೆಯಲು ಎಷ್ಟರಮಟ್ಟಿಗೆ ಸಾಧ್ಯವಾದೀತು ಎಂದು ಅಂದು ಮಾನಸಿಕ ಮಾಡಿದ್ದೆ.


ರಂಗಮಂಗ ರಂಜನೋದ್ಯಾನದ ‘ ರಂಗಮಂಗರು ’ ನನ್ನನ್ನು ಒತ್ತಾಯ ಪಡಿಸದಿದ್ದರೆ ಈ ‘ ತಾಪತ್ರಯ ’ವು ನಿಮ್ಮೆಲ್ಲರ ಎದುರು ಬರಲು ಸಾಧ್ಯವಿರಲಿಲ್ಲ. ಅಂದಿನ ನನ್ನ ಹುಚ್ಚುತನವು ಇಂದಿನ ನನ್ನ ‘ತಾಪತ್ರಯ’ದಲ್ಲಿ ರೂಪಗೊಂಡಿತು

ಇದರಲ್ಲಿಯ ಮೊದಲನೆಯ ‘ ಆಗ-ಈಗ ’ ಇದು ಬೆಳಗಾವಿಯ ಕಥಾಕುಂಜದಲ್ಲಿಯೂ ‘ ತಾಪತ್ರಯ ’ ಹಾಗೂ ‘ನಾಟಕದ ಹಾಡು’ಗಳು ಧಾರವಾಡದ ಜಯಕರ್ನಾಟಕದಲ್ಲಿಯೂ ಇದಕ್ಕೂ ಮೊದಲು ಪ್ರಕಟವಾಗಿವೆ. ಅವುಗಳನು ಎತ್ತಿ ಇಲ್ಲಿ ಪುನಃ ಮುದ್ರಿಸಲಿಕ್ಕೆ ಒಪ್ಪಿಗೆಯನ್ನಿತ್ತ ಸಂಪಾದಕದ್ವಯರಿಗೂ ನನ್ನ ಪ್ರಣಾಮಗಳು.

ಇದರಿಂದ ರಂಜನೋದ್ಯಾನದ ಗುರಿ ಎಷ್ಟರ ಮಟ್ಟಿಗೆ ಸಾಧಿಸುವದು ಎಂಬದನ್ನು ವಾಚಕರೇ ಊಹಿಸಬೇಕು.

ಧಾರವಾಡ<br>
೧-೯-೪೦

ಜೋಶಿ ಕೇಶವ



ಶ್ರೀರಂಗ

ನನ್ನಲ್ಲಿ
ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ
ಸಾಹಿತ್ಯದ ಅಭಿರುಚಿಯನ್ನು
ಹುಟ್ಟಿಸಿದ
**ಶ್ರೀರಂಗರಿಗೆ–**

**–ಕೇಶವ**

# ತಾಪತ್ರಯ

# ಪರಿವಿಡಿ


| | | ಪುಟ |
|---|---|---|
| ೧. | ಆಗ—ಈಗ | ೧ |
| ೨. | ತಾಪತ್ರಯ | ೯ |
| ೩. | ನಾಟಕದ ಹಾಡು | ೨೪ |
| ೪. | ಕಾಂತ | ೩೨ |
| ೫. | ಆಶೀರ್ವಾದ | ೪೫ |
| ೬. | ಸಂಶೋಧನೆ | ೫೫ |

# ಆಗ-ಈಗ

**ನಾ**ನು ಅವಳನ್ನು ಮೊದಲು ನೋಡಿದ್ದು ಆಕೆ ಚಿಕ್ಕ ಬಾಲಿಕೆ ಇದ್ದಾಗ. ಆಗ ಅವಳ ವಯಸ್ಸು ೧೦ ವರುಷ ಇರಬಹುದು. ಕೈಯಲ್ಲಿ ಪುಸ್ತಕಗಳನ್ನಿಟ್ಟುಕೊಂಡು ಶಾಲೆಗೆ ಹೋಗುತ್ತಿದ್ದಾಗ-ನಾನು ನೋಡಿದ್ದು, ನೋಡುತ್ತಿರುವುದು. ಅವಳನ್ನು ಮೊದಲನೆಯ ಸಲ ನೋಡಿದೊಡನೆಯೆ ನನ್ನ ಮನಸ್ಸಿನಲ್ಲಿ ಒಂದುತರದ—ಒಂದು ಭಾವನೆ – ಆಹುದು 'ಭಾವನೆ' ಎನ್ನಿರಿ—ಒಂದು ಮೂಡಿತು. ಭಾವನೆ ಎಂಬ ಗಡುಚಾದ ಶಬ್ದ ಕೇಳಿದೊಡನೆ ಓದುಗರ ಮನಸಿನಲ್ಲಿ ವಿಪರೀತ ಕಲ್ಪನೆಯಾಗುವ ಸಂಭವವಿದೆ. ನನ್ನದು ಕವಿಗಳ ಭಾವನೆಯಲ್ಲ; ಅವಳ ಸಲುವಾಗಿ ಇಲ್ಲದ ಸಲ್ಲದ ಕಲ್ಪನೆಗಳಲ್ಲ. ಅವಳ ಸೌಂದರ್ಯದಲ್ಲಿ ಆದೇನೊ ಸೊಬಗು ಇದೆ. ಅವಳ ಮುಖ ಒಂದು ವಿಧ ಮುದ್ದಾಗಿದೆ. ಅವಳ ಉಡುಪು —ತೊಡುಪುಗಳಲ್ಲಿ ಯಾವುದೊ ಒಂದು ಓರಣವಿದೆ. ಇದೇ ನನ್ನ ತಲೆಯಲ್ಲಿ– ಇದಕ್ಕೆಯೆ 'ಭಾವನೆ' ಎಂದದ್ದು. ನಾನು ಅವಳನ್ನು ನೋಡಿದಾಕ್ಷಣವೇ ನನ್ನೊಬ್ಬ ಮಿತ್ರನಿಗೆ ಅವಳನ್ನು ಕುರಿತು 'This is a promising girl' ಎಂಬ ಉದ್ಗಾರವನ್ನು ತೆಗೆದೆ—'ತೆಗೆದೆ' ಎನ್ನುವುದಕ್ಕಿಂತ ಉದ್ಗಾರ ತಾನಾಗಿಯೆ ಹೊರಚಿಮ್ಮಿತು ಎನ್ನಬಹುದು. ಅದಕಾಗಿಯೆ 'ಭಾವನೆ' ಎಂಬ ರಸಿಕ ಶಬ್ದವನ್ನು ಉಪಯೋಗಿಸಿದ್ದು.

ಈಗ ನಾನು ಅವಳನ್ನು ನೋಡುವದು ಎರಡನೆಯ ಸಲ- ೩, ೪ ವರ್ಷಗಳ ತರುವಾಯ ಎಂದರೆ ಅವಳ ೧೩-೧೪ ನೆಯ ವಯಸ್ಸಿನಲ್ಲಿ. ಆಗ ಅವಳನ್ನು ನೋಡಿದ್ದು ಸಹಜ ವಾಗಿ; ಈಗ—ಅವಳನ್ನು ನೋಡಬೇಕೆನ್ನಿಸುವುದು. ಆಗ ನೋಡಿದ್ದು ಮುಗ್ಧಮುಖ; ಈಗ ನೋಡಲೇಬೇಕೆನ್ನಿಸು ವುದು ಅವಳ ಮೋಹಕವಾದ ಮುಖ. ಮೊದಲು ಮುದ್ದಾದ, ಮುಗ್ಧವಾದ ಅವಳ ಮುಖದಲ್ಲಿ ಈಗೊಂದು ಕೆಣಕುವ ಕಳೆ ಕುಣಿಯುತ್ತಲಿದೆ. ಜಗತ್ತನ್ನೆಲ್ಲ ಕನಿಕರದಿಂದ, ಕರುಣೆ ಯಿಂದ ಕೊಂಚ ಹೆಮ್ಮೆಯಿಂದಲೆ ನೋಡಿ ನಗಬೇಕೆನ್ನು ವಂತೆ ಅವಳ ತುಟಿಗಳಲ್ಲಿ ಮುಗುಳ್ನಗೆ; ಆದರೂ ಅದನ್ನು ನೋಡಿದರೆ ಮನಸ್ಸಿಗೆ ಆಲ್ಹಾದ. ಮೊದಲು ಅವಳನ್ನು ನೋಡಿದಾಗ ಕಂಡು ಬಂದ ನಿರ್ಮಮತ್ವ, ನಿರ್ಮಲತ್ವ ಈಗವಳ ಮುಖದಲ್ಲಿ ಇಲ್ಲವೇ ಇಲ್ಲ. ಅವಳ ಅಂಗಾಂಗ ಗಳಲ್ಲಿ, ಅವಳ ನಡೆ-ನುಡಿಗಳಲ್ಲಿ, ಅವಳ ಹಾವ-ಭಾವಗಳಲ್ಲಿ ಅದೇನೊ ಒಂದು ತರದ ಆಕರ್ಷಕ ಶಕ್ತಿ ಬಂದಿದೆ ಎಂದು ಯಾರಿಗೂ ಎನ್ನಿಸದಿರದು; ಏನೊ ನನಗಂತೂ ಹಾಗೆ ಎನ್ನಿ ಸಿತು, ನಿಜ.

ಇಷ್ಟೆಲ್ಲ ಒಂದೇ ಮಾತಿನಲ್ಲಿ ಹೇಳಲು ಬರುತ್ತಿದ್ದಿಲ್ಲವೆ— ಅವಳಲ್ಲಿ ಈಗ ಕೌಮಾರ್ಯ ಬೆಳೆದು ಯೌವನ ನಗುತ್ತಲಿದೆ. ಎಂದು ? ಹೀಗೆ ನೀವು ಕೇಳಬಹುದು. ಅಹುದು, ಹಾಗೆ ಹೇಳಬಹುದಾಗಿತ್ತು-ನಾನು ಕವಿಯಾಗಿದ್ದಿದ್ದರೆ! ಇದಲ್ಲದೆ ಹಾಗೆ ಹೇಳಿದಲ್ಲಿ ಈ ಸಲ ನನ್ನಲ್ಲುಂಟಾದ 'ಭಾವನೆ'ಯ ವಿಷಯುವಾಗಿ ತಮ್ಮ ಗ್ರಹಿಕೆ ತಪ್ಪಾಗಬಹುದೆಂಬ ಹೆದರಿಕೆ. ಯಾವುದೇ ಹೆಂಗಸನ್ನು ನೋಡಿದ ಮಾತ್ರಕ್ಕೆ ಕಾಮುಕನ

ಮನಸಿನಲ್ಲಿ ಉದ್ಭವಿಸುವ ವಿಚಾರದ ತರ ಒಂದಿದೆಯಲ್ಲ, ನನ್ನದು ಅಂತಹ-ದಲ್ಲ. ಅದಕಾಗಿಯೆ ಬರಿಯ 'ಯೌವನದ ಕುಮಾರಿ' ಎಂದು ಹೇಳಲಿಲ್ಲ. ಹಾದಿಯಲ್ಲಿ ಹೋಗುವ ಹೆಂಗಸನ್ನು ನೋಡಿ ಹುಡುಗರ ತಲೆಯಲ್ಲಿ ಕುಣಿಯುವದಿಲ್ಲವೆ ಒಂದು ಹುಚ್ಚುವಿಚಾರ? ನನ್ನದು ಅಂತಹದೂ ಅಲ್ಲ, ಅದಕಾಗಿಯೆ 'ಕೌಮಾರ್ಯ ಬೆಳೆಯಿತು' ಎನ್ನಲಿಲ್ಲ. ಆಂಗ್ಲಭಾಷೆಯ ಅನೇಕಾನೇಕ ಪುಸ್ತಕಗಳನ್ನು (ಬಹುಜನರಿಗೆ ತಿಳಿಯಲಿಕ್ಕಿಲ್ಲವೆಂಬ ಭರವಸೆಯಿಂದ ಆಂಗ್ಲಭಾಷೆಯವುಗಳನ್ನು) ಓದಿ, ತಮ್ಮ ಜೀವನದಲ್ಲಿ ಒಂದು ಉತ್ಸಾಹ ತುಂಬಿ ನಾಯಕರಂತೆ, ಉಳಿದ ಕುಮಾರಿಯರನ್ನು ನಾಯಿಕೆ (heroine) ಯರೆಂದು ನೋಡುವ ವಿದ್ಯಾರ್ಥಿಗಳದೂ ಒಂದು ಅಭ್ಯಾಸ ಇದೆ. ಮಹನೀಯರೆ, ನನ್ನದು ಹಾಗೂ ಅಲ್ಲ. ಹಾಗಾದರೆ ಏನೆಂದು ಕೇಳುವಿರೊ? ನನ್ನನ್ನು ಸ್ವಾರ್ಥಿ ಎಂದು ನೀವು ನಗುವದಿಲ್ಲವಾದರೆಹೇಳುವೆ—ಎಂತಹ ಹುಚ್ಚ ನಾನು! ಹೇಳಿಯೆ ಬಿಟ್ಟೆನಲ್ಲ! ಇನ್ನು ನೀವು ನಕ್ಕರೂ ಅಷ್ಟೆ. ಕಟ್ಟಿಗೆಯ ಗೊಂಬೆಯನ್ನು ಆಡಿಸುವಾಗ, ಅದು ನಗುವದೆಂದು ಅದನ್ನು ಮುತ್ತಿಟ್ಟು, ಅದು ಅಳುವುದೆಂದು ಜೋಗುಳದಿಂದ ಸಂತಯಿಸಿ, ಉಣ್ಣುವುದೆಂದು ಅಡಿಗೆ ಮಾಡಿ ನಲಿಯುವ ಮಗುವಿನಂತೆ ನಾನು ಸ್ವಾರ್ಥಿ. ಅವಳನ್ನು ನನ್ನವಳನ್ನಾಗಿ ಮಾಡಿಕೊಂಡು, ನನ್ನ ಕಷ್ಟ-ನಷ್ಟಗಳಲ್ಲಿ ಅವಳು ಸಮಭಾಗಿನಿಯಾಗಬೇಕು ಎಂದು ನನ್ನ ವಿಚಾರ ಉದಾತ್ತ ವಿಚಾರ, ಉಚ್ಚತಮವಾದ ವಿಚಾರ ಎನ್ನುವಿರೊ? ನನಗೆ ಗೊತ್ತಿಲ್ಲ. ಬಡವರಿಗೂ ಬಲ್ಲಿದರಿಗೂ ತೋಚುವ ವಿಚಾರ ಎಂಬದು ನಾ ಬಲ್ಲೆ.

ಇದನ್ನೆ ಒಂದು ಮಾತಿನಲ್ಲಿ ಯಾಕೆ ಮುಗಿಸಲಿಲ್ಲ? ಎಂದು ಕೋಪಿಸಬೇಡಿರಿ. ಅದು ಬರಿಯ ನನ್ನ ವಿಚಾರ, ನನ್ನ ತಲೆತುಂಬಿದ ವಿಚಾರ. ಬರಿಯ ವಿಚಾರದಿಂದ ಅವಳು ನನ್ನವಳಾಗಲಾರಳು, ಎಂಬುದನ್ನು ತಮ್ಮಂತಹ ಅನುಭವದ ಹಿರಿಯರಿಗೆ ಬೇರೆ ಹೇಳಬೇಕಾಗಿಲ್ಲ. ಆ ವಿಚಾರವು ಆಚಾರದಲ್ಲಿ ಬರಬೇಕು ಎಂದು ನನ್ನ ಹಂಬಲ. ಹಂಬಲದಂತಹ ಒಳಗಿನ ಬೆಂಕಿಯಲ್ಲಿ ಕೂಡ ವಿಚಾರ ಕುದಿದು ಪಕ್ವವಾಗಿ ಆಚಾರವಾಗದು. ಇನ್ನು ಮುಂದೆ ಗತಿ? ಅನೇಕ ಪ್ರಯತ್ನಗಳನ್ನು ಮಾಡಬೇಕು. ಆದರೆ? ನನ್ನಲ್ಲಿ ಕುಂದು-ಕೊರತೆಗಳಿವೆಯಲ್ಲ! ಮಾನಾಪಮಾನಗಳ ಜಯಾಪಜಯಗಳ ಹೆದರಿಕೆ ಇದೆಯಲ್ಲ! ಸಮಾಜದ ಸಣ್ಣ-ದೊಡ್ಡ ತೊಡಕು-ನಿಯಮಗಳಿವೆಯಲ್ಲ! ಇದಲ್ಲದೆ, ನನ್ನ ಸರಿಕರು-ಅವರಿಗೆ ಸರಿ ಬರುವುದೋ ಇಲ್ಲವೊ? ನಿಮಗೆ ಆಶ್ಚರ್ಯವೆನ್ನಿಸಬಹುದು—ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಏನು ಸಂಬಂಧ ಎಂದು. ಆದರೂ ಈ ಎಲ್ಲ ಎಡರುಗಳನ್ನು ದಾಟದೆಯೆ ಅವಳು ನನ್ನವಳಾಗಬಹುದೆ? ನೀವು ನಿಮ್ಮ ಕಾಲಕ್ಕೆ ತರುಣ-ರಿದ್ದಿರಿ. ನಿಮಗೂ ಹೀಗೆಯೆ ಎನ್ನಿಸಿರಬಹುದಲ್ಲವೆ? "ಎನ್ನಿಸಿದರೇನಾಯಿತು? ಬಾಯಿಬಿಚ್ಚಿ ಹೇಳಲು ನಿನ್ನಂತೆ ನಾವು ನಾಚುತ್ತಿರಲಿಲ್ಲ" ಎನ್ನಬೇಡಿರಿ. ನನಗೆ ನಾಚಿಕೆಯಾಗಿದೆ. ಇದನ್ನೆ ನಾಳೆ ಇಳಿವಯಸ್ಸಿನಲ್ಲಿ ನಾನು ನಿಮ್ಮಂತೆಯೆ ನಗೆಯಿಂದಲೆ ಹೇಳಬಹುದು, ನಿಧಾನವಾಗಿ ಹೇಳಬಹುದು. ಆದರೆ ಸದ್ಯಕ್ಕೆ ಮಾತ್ರ ಹಿರಿಯರಿಗೆ ಇದನ್ನು ಹೇಳಬೇಕೆ, ಬಾರದೆ? ಎಂದು ನಾಚಿಕೆ. ಹೇಳಿದರೆ ಹಿರಿಯತನದಿಂದ ಹಳಿಯುವಿರಿ, ಹಳಿದರೂ ಅವಳಿಗಾಗಿ

ಹಂಬಲಿಸುವ ಜೀವನ ನನ್ನದು. "ಅಯ್ಯೋ!" ಎಂದು ಕನಿಕರ ಬೇಡ ನನ್ನ ಸಲುವಾಗಿ. ಮನದ ಇಚ್ಛೆಯನ್ನು ಮನಬಿಚ್ಚಿ ಹೇಳಲಾಗದು ಎಂಬುದು ತರುಣರಿಗೆ ಹಿರಿಯರು ಹೇಳುವ ಶಾಸ್ತ್ರ; ಅದರಿಂದ ಮನದಲ್ಲಿಯೇ ಮರುಗುವುದು ಯುವಕರ ರೂಢಿ. ಅದಕಾಗಿ ನೀವು ಕನಿಕರ ತೋರಿಸ ಬಹುದು; ನಾನು ನಿಶ್ಚಯಿಸಿರುವೆ, ಶಾಸ್ತ್ರವನ್ನೂ ರೂಢಿ ಯನ್ನೂ ಲೆಕ್ಕಿಸಬಾರದೆಂದು ನಿಶ್ಚಯಿಸಿರುವೆ. ಅದನ್ನೆ ಹೇಳಬೇಕೆಂದಿರುವೆ. ಯಾರಿಗೆ! ಯಾರಿಗೆ ? ಯಾರಿಗೆ ?.... ಗರ್ಜನೆ ಮಾಡಬೇಡಿರಿ. ನನಗೆ. ನಾನು ಹೇಳುವುದು ನನಗೆ. ನನ್ನ ಹೊರತಾಗಿ ನನ್ನವರೆಂಬುವರು ಯಾರೂ ಇಲ್ಲ–ಅದ ಕಾಗಿಯೆ ಅಲ್ಲವೆ ಅವಳನ್ನು ನನ್ನವಳನ್ನಾಗಿ ಮಾಡಿಕೊಳ್ಳ ಬೇಕೆನ್ನುವುದು ?

ಹುಚ್ಚುತನ ಮಾಡಿದ್ದೆ ಒಮ್ಮೆ, ಯಾರ ಮುಂದೂ ಹೇಳ ಬೇಡಿರಿ! ನನ್ನ ಆಪ್ತರೊಬ್ಬರ ಮುಂದೆ ನನ್ನ ಮನದ ಮರು ಳಾಟ (ಶಬ್ದ ಅವರದು) ವನ್ನು ಹೇಳಿದೆ. ಅವರೂ ಎಲ್ಲ ರಂತೆ ನಕ್ಕರು ಆಶ್ಚರ್ಯ ತೋರಿದರು. ಕನಿಕರ ಬೀರಿದರು. ಕೊನೆಗೆ ಜಾಗರೂಕತೆಯಿಂದ ಈ ಕೆಲಸವನ್ನು ಮಾಡಲು ಒ-ಪ್ಪಿ-ದ-ರು! ಆ ಮೇಲೆ? ಅವರಿಗೂ–ಹಿರಿಯರಾದರೂ– ಬಂದಿತು ತೊಡಕು. ಸಮಾಜದ ತೊಡಕು. ಅವರೂ ನಮ್ಮ ಸಮಾಜದವರೇ. ಹೀಗೆ ಹೇಳಿದರೆ ನಮ್ಮ ಸಮಾಜ ವನ್ನೆ ನಾನು ಹಳಿಯುವೆ ಎಂದು ತಿಳಿಯಬೇಡಿರಿ. ಇದ್ದ ದ್ದನ್ನು ಹೇಳಿದೆ; ಗಂಡಿನವರೆಂದರೆ ಬ್ರಾಹ್ಮಣರಿಗಿಂತಲೂ ಹೆಚ್ಚಿನ ಯೋಗ್ಯತೆ–ಅಧಿಕಾರಗಳುಳ್ಳ ಜಾತಿಯಂತಿಲ್ಲವೇ?

" ನಿಮ್ಮ ಹುಡುಗೆಯಲ್ಲಿ ನಮ್ಮ ಹುಡುಗನ ಪ್ರೇಮ " ಎಂದು ತಾವಾಗಿಯೆ ಹೇಳುವುದು ಅವರ ಮರ್ಯಾದೆಗೆ ತಕ್ಕುದೆ? " ನಿಮ್ಮ ಹುಡುಗೆಯನ್ನು ಅವನಿಗೆ ಮದುವೆಮಾಡಿ ಕೊಡುವಿರಾ? " ಎಂದು ಕೇಳಿದರೆ ಅಪಮಾನವಲ್ಲವೆ? ಕನ್ಯೆಯವರಾದರೂ ಏನು ಮಾಡಿಯಾರು? ಪೇಟೆಯಲ್ಲಿ ಸಾಮಾನು ಕೊಂಡುಕೊಂಡಂತೆ ವರನನ್ನು ದೊರಕಿಸುವದು. ಹೊಸ ಧೋತರ ಕೊಂಡುಕೊಳ್ಳುವಾಗ ಅವಕ್ಕೆ ತೂತು ಇಲ್ಲವೆ ಹೊಲಸು ಇದೆಯೊ ಹೇಗೆ ಎಂದು ನೋಡುವುದಿಲ್ಲವೆ? ಹೊಸ ದೋತರಕ್ಕೆ ತೂತು ಇಲ್ಲವೆ ಹೊಲಸು ಇರುವುದು ರೂಢಿ ಎಂದೊ ಅದರರ್ಥ? ಅದರಂತೆಯೆ ವರನ ಕುಂದು-ಕೊರತೆಗಳನ್ನು ಹುಡುಕಿ-ನೋಡಬೇಕಲ್ಲವೆ? ಒಟ್ಟು, ಹುಡುಗ-ಹುಡುಗೆಯರು ಮದುವೆಯಾಗಿ ಸಂಸಾರ ಹೂಡಿದರೆ **ಹಿರಿಯರಿಗೆ** ಆನಂದವಾಗಬೇಕಲ್ಲವೆ? ಆಂ....ಅಲ್ಲ, ಹಿರಿಯರು ನೀವು — ನೋಡಿರಿ, ಎಂದೆ. ಹೀಗಿರಲು "ಸಂಸಾರವೆಂದರೆ ಸರಿಬಂದ ಸಂಗಾತಿಯ ಸಹ ಸಾಗಿಸುವ" ಮುಂತಾಗಿ ತರುಣರು ಹೇಳುವುದು ಹುಚ್ಚುತನವಲ್ಲವೆ? ಆಂ....ಅಲ್ಲ, ನೀವೂ ಒಮ್ಮೆ ತರುಣರಿದ್ದಿರಿ, ನೋಡಿರಿ. ನೋಡಿ ಹೇಳಿರಿ ಎಂದೆ. ಆದರೂ ನನ್ನ ನಿಶ್ಚಯ ಬೇರೆ ಇದೆ ಎಂದು ಹೇಳಿರುವೆನಲ್ಲ. ನನಗೆ ವ್ಯವಹಾರ ಬೇಡ, ರೂಢಿ ಬೇಡ.

" ಅದಿರಲಿ. ಹೀಗೆ ನಿನ್ನ ಮನಸ್ಸನ್ನು ಕಲುಷಿತ ಮಾಡಿದ ತರುಣಿಯಾದರೂ ಯಾರು " ನಾನೂ ಅದನ್ನೆ ಕೇಳುವೆ. ಅವಳು ಯಾರು? ಅವಳ ತಂದೆ-ತಾಯಂದಿರು ಯಾರು?

ಅವಳ ವ್ಯವಸಾಯವೇನು? ಸಿರಿವಂತರೊ ಬಡವರೊ? ಯಾವದನ್ನೂ ಅರಿಯೆ ನಾನು. ಅದಕಾಗಿಯೆ ಅರಿತವರಿಂದ ಸಹಾಯ ಅಪೇಕ್ಷಿಸಿದ್ದೆ. ಇನ್ನೂ ನಿಮಗೆ ಕುತೂಹಲವಿದ್ದರೆ-ನನ್ನೊಡನೆ ಬರುವುದಾದರೆ ತೋರಿಸುವೆ ಅವಳನ್ನು. ಮಾತ್ರ ನಾನು ನೋಡುವಂತೆಯೆ ನೀವೂ ನೋಡಬೇಕು ಅವಳನ್ನು. ದುಂಡು-ದುಂಡಾಗಿ ಮುದ್ದಾದ ಮುಖ, ಎಳಸಾದ ಮೂಗು, ಮುದ್ದಾದ ಅರೆತೆರೆದ ಬಾಯಿ,....ಮತ್ತೇಕೆ ಅವಳ ವರ್ಣನೆ? ಎಂದು ಬೇಸರಪಡಬೇಡಿರಿ. ಆವಳನ್ನು ಎಷ್ಟೊಂದು ಸಲ ವರ್ಣಿಸಿದರೂ ಸಮಾಧಾನವಾಗದೆ ಮತ್ತೊಮ್ಮೆ ಮತ್ತೊಂದು ವಿಧವಾಗಿ ವರ್ಣಿಸಬೇಕು ಎನ್ನಿ-ಸುತ್ತದೆ. ಕ್ಷಣಕ್ಷಣಕ್ಕೆ ನವೋನವವಾಗಿ ಹೆಚ್ಚು ಅಂದವಾಗಿ ಕಾಣುವ ಅವಳ ಪರಿಚಯವನ್ನು ನಿಮಗೆ ಹೇಗೆ ಮಾಡಿಕೊಡುವುದು? ಪ್ರೇಮ ಸುಧೆಯನ್ನು ಸೂಸುವುದು ಅವಳ ಕೆಂದುಟಿ (ಏನು ಚೆಂದುಟಿಯೊ! ಎಂದು ಹೇಳಲಿಯಾ? ಅವಳ ಕಣ್ಣುಗಳೆಂದರೆ ಮೋಹಿಪ ಮಾಯೆ ಎಂದು ಹೇಳಲಿಯಾ? ಲಲಾಟ ಎದ್ದು ಕಾಣುವುದು, ಹುಬ್ಬುಗಳ ನಡುವೆ ಸಣ್ಣ ಕುಂಕುಮ ಬೊಟ್ಟು—ಅದನ್ನು ಕಣ್ಣಾರೆ ನೋಡಿಯೇ ತೀರಬೇಕೆಂದು ಹೇಳಲಿಯಾ? ತುಂಬಿದ ಅವಳ ಕಪೋಲಗಳು—ಆ ಆ—ತುಂಬಿ ಕಾಣುತ್ತವೆ ಎಂದೇ ಹೇಳಲಿಯಾ? ಎತ್ತರಳೂ ಅಲ್ಲ ಗಿಡ್ಡಮ್ಮೆಯೂ ಅಲ್ಲ. ದೇಹಕ್ಕೆ ತಕ್ಕ ಅವಯವ, ತನಗೆ ತಕ್ಕ ಹಸರು ಸೀರೆ ಉಟ್ಟಿದ್ದು, ಅದಕ್ಕೆ ತಕ್ಕ ಕುಪ್ಪುಸ ತೊಟ್ಟಿದ್ದು, ಟೊಂಕದಲ್ಲಿ ಕೊಡ (ಅವಳು ನೀರಿಗೆ ಹೋಗುವಾಗ ನಾನವಳನ್ನು ನೋಡಿದ್ದು), ಕಪ್ಪಾದ ಕೂದಲು, ತಿದ್ದಿಕಟ್ಟಿದ ಬುಚಡ–ಹೇಳಿದಂತೆ ನೆನೆದಂತೆ ಹೆಚ್ಚೆಚ್ಚು ಸುಂದರ ಕಾಣು

ವಳು ಅವಳು. ನಿಮ್ಮ ಅಭಿಪ್ರಾಯವೇನು ? (ಸರಿಯಾಗಿ ಯೋಚಿಸಿ ಹೇಳಿರಿ, ಯಾಕೆಂದರೆ ಅವಳು ನಿಮಗೆ ಪರಸ್ತ್ರೀ). ಇಂಥವಳನ್ನು ನನ್ನವಳನ್ನಾಗಿ ಮಾಡಿಕೊಳ್ಳುವ ಆಸೆ ನನಗಿರ ಬಾರದೇಕೆ ?

ಇನ್ನೂ 'ಆಸೆ-ಆಸೆ' ಎಂದೇ ಹೇಳುತ್ತಿರುವೆನಲ್ಲ ! ಅದನ್ನು ಪೂರಯಿಸಲು ಹಲಕೆಲವು ಪ್ರಯತ್ನಗಳನ್ನೂ ಮಾಡಿದೆ. ತಕ್ಕ ಪ್ರತಿಫಲ ದೊರಕಲಿಲ್ಲ. ಮಾನ-ಮರ್ಯಾದೆ ಗಳನ್ನು ಬದಿಗಿಟ್ಟು ನನ್ನ ಆಪ್ತರು ಅವಳ ಮನೆಯವರಿಗೆ ಹೇಳಿದರು. "ತಾವಾಗಿಯೆ ಕೇಳಲು ಬಂದವರು" ಎಂಬ ಸಂಶಯದಿಂದ ನನ್ನ ಇಚ್ಛೆಯನ್ನು ಅವರು-ಅವಳ ಮನೆ ಯವರು-ಪೂರಯಿಸಲಿಲ್ಲ. ಆ ಮೇಲೆ ನನ್ನ ಆಪ್ತರೂ-ಅವಮಾನಿತರಾಗಿ-ನನ್ನನ್ನೆ ದೂಷಿಸಿದರು; ನಾನು ಆ ಕುಮಾರಿಯ ಸೌಂದರ್ಯದ ಮೇಲೆ ಎಲ್ಲ ಜವಾಬುದಾರಿ ಯನ್ನು ಹೊರಿಸಿದೆ. 'ಹೊರಿಸಿದೆ' ಎಂಬುದು ತೋರಿಕೆಗೆ ಮಾತ್ರ. ಅವಳಿಗಾಗಿ ಒಳ-ಒಳಗೆ ಕೊರಗಿದೆ. ಅವಳ ಹಿರಿಯರನ್ನು ಶಪಿಸಿದೆ. ಅವರು ಇದ್ದಿಲ್ಲವೆಂದರೆ—ಹುಚ್ಚು ! ಅವಳೇ ಇರುತ್ತಿರಲಿಲ್ಲ. ಸಿಟ್ಟು ಸಮಾಜದ ಮೇಲೆ ಅಪ್ಪಳಿಸಿತು, ರೂಢಿರಾಕ್ಷಸನ ಮೇಲೆ ಪ್ರತಿಭಟಿಸಿತು. ನನ್ನ ಇನಿಯಳಿಗಾಗಿ, ನನಗಾಗಿ ಹೊಸ ಸಮಾಜವನ್ನು, ಹೊಸ ರೂಢಿಯನ್ನು ಹುಟ್ಟಿಸುವ ನಿಶ್ಚಯಮಾಡಿದೆ, ಹಟ ಹಿಡಿದೆ.

× × × ×

ಆ ಮಾತಿಗೆ ಇಂದಿಗೆ ಎಷ್ಟು ವರ್ಷಗಳಾದವೊ ! ಅವಳು ಮಾತ್ರ ಇನ್ನೂ ನನ್ನ ಮನದ ಮಡದಿ....

# ತಾ ಪ ತ್ರ ಯ

ಭೀಮರಾಯರ ಮನೆಯಲ್ಲಿಯ ಒಂದು ಕೋಣೆ, ರಂಗಸ್ಥಳದ ಮಧ್ಯದಲ್ಲಿ ಒಳಕ್ಕೆ ಹೋಗುವ ಬಾಗಿಲು. ರಂಗಸ್ಥಳದ ಎಡಬದಿ– ಅಂದರೆ ಪ್ರೇಕ್ಷಕರ ಬಲಬದಿಗೆ ಒಂದು ಮೇಜು, ಒಂದೆರಡು ಕುರ್ಚಿಗಳು ಕಂಡುಬರುವವು. ಮೇಜಿನಮೇಲೆ ಒಂದು ಸ್ಟ್ಯಾಂಡು (ದೀಪ) ಉರಿಯುತ್ತಿದೆ. ಪ್ರೇಕ್ಷಕರ ಎಡಬದಿಗೆ– ಅಂದರೆ ರಂಗಸ್ಥಳದ ಬಲಬದಿಗೆ ಒಂದು ಕೂಡ್ರುವ ಗಾದಿ, ಒಂದು ಲೋಡು. ಸಮಯ ರಾತ್ರಿ ೯॥ ಘಂಟೆ. ತೆರೆಯು ಮೇಲಕ್ಕೆ ಏಳುವಾಗ್ಗೆ ರಾಯರು ಎಲೆ ಅಡಿಕೆಯ ಡಬ್ಬಿಯನ್ನು ತೆರೆಯುವದರಲ್ಲಿ ಇದ್ದಾರೆ. ಅದನ್ನು ತೀವ್ರವಾಗಿ ತೆರೆಯಲು ಬಾರದ್ದರಿಂದ ಸಿಟ್ಟಿಗೆ ಬರುವರು. ಆ ಸಿಟ್ಟಿನ ಭರದಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡುವರು. ಅದೂ ನಿಷ್ಫಲವಾಗುವದು. ಅದೇ ಸಮಯದಲ್ಲಿ ಒಳಗಿನಿಂದ ಹಾಡುವ ಧ್ವನಿಯು ಕೇಳಬರುವದು 'ಇದು ಬೇರೆ ಸುರು ಆಯಿತೆ' ಎಂದು ತಮ್ಮಷ್ಟಕ್ಕೇ ಗುಣಗುಟ್ಟುವರು. ಸ್ವಲ್ಪ ಹೊತ್ತು ಹಾಗೆಯೇ ಕುಳಿತುಕೊಳ್ಳುವರು. ಸಮಾಧಾನವಾಗದೆ ಒಂದೆರಡು ಸಲ ಅತ್ತಿಂದಿತ್ತ ಆಡ್ಡಾಡಿ ಏನೋ ನೆನಪಾದವರಂತೆ ಬಾಗಿಲ ಬಳಿಗೆ ಹೋಗಿ)

ರಾಯರು:— ಏನೆ, ಏನುಮಾಡುತ್ತಿರುವಿಯೇ ? ೧೦ ಘಂಟೆ ಆದರೂ ನಿನ್ನ ಹಾಳು ಕೆಲಸ ಮುಗಿಯೋದೇ ಇಲ್ಲ ! ಬೇಗ ಬಾ ಇಲ್ಲಿ.

ಪುಟ್ಟವ್ವ:— (ಪ್ರವೇಶಿಸಿ) ೯ ಘಂಟೇಕ್ಕೆ ಮನಿಗೆ ಬರೋದು. ಆ ಮೇಲೆ '೧೦ ಹೊಡೆದರೂ ನಿನ್ನ ಕೆಲಸಾನ ತೀರೋದಿಲ್ಲ, ಅಂತ ನನ್ನ ಮೇಲೆ ಒದರಾಡೋದು.

ರಾಯರು:— ಅದು ಇರಲಿ ಬಿಡೆ! ನಿನ್ನ ಕೂಡ ಒಂದು ಸ್ವಲ್ಪ ಮಾತನಾಡಬೇಕಾಗೇದ ಒಂದು ಮಹತ್ವದ ವಿಷಯದ ಮೇಲೆ ಮಾತನಾಡಬೇಕಾಗೇದ.

ಪುಟ್ಟವ್ವ:— ಏನ ತಾಯಿ ಅದು, ನನ್ನ ಕೂಡ ಮಾತನಾಡುವಂಥ ಮಹತ್ವದ ವಿಷಯ?

ರಾಯರು: — ಇಲ್ಲಿ ನೋಡು. ನಮ್ಮ ಪದ್ದಾಗ ೧೩ ತುಂಬಿದವು.

ಪುಟ್ಟವ್ವ:—(ನಡುವೆ ಬಾಯಿ ಹಾಕಿ) ಯಾರು ಹೇಳತಾರ?

ರಾಯರು:— ಜನರು ಹೇಳತಾರೆ.

ಪುಟ್ಟವ್ವ:— (ಅಣಕಿನಿಂದ) ಆಹಾ! ಜನರು ಹೇಳತಾರಂತ ಜನರು. ೯ ತಿಂಗಳು ಹೊತ್ತು ಹೆತ್ತವರ ಹಾಗೆ. (ಒಳಕ್ಕೆ ನೋಡಿ) ಪದ್ದಾ, ಒಲೀಮೇಲೆ ಹಾಲು ಇಟ್ಟೇನಿ ನೋಡತಿರವ್ವಾ ಉಕ್ಕ್ಯಾವು.

ರಾಯರು:— ಅಲ್ಲ ಆಕೀಗೆ ೧೩ ತುಂಬಿದ್ದು ನನಗೂ ಗೊತ್ತದsನ

ಪುಟ್ಟವ್ವ:— ಗೊತ್ತು ಇದ್ದರ ಎನುಮಾಡಬೇಕಂತೀರಿ?

ರಾಯರು: — (ಸಿಟ್ಟನ್ನು ತಡೆಯುತ್ತ) ಸ್ವಲ್ಪ ಸಮಾಧಾನದಿಂದ ಕೇಳತೀಯೋ ಏನು ಒಮ್ಮಿಗೇಲೇ ಒದರಾಡತೀಯೋ? ಇಲ್ಲಿ ನೋಡು ಅವಳಿಗೆ ಈಗ ಮದಿವಿ ವಯಸ್ಸು ಆಗೇದ. ಅವಳಿಗೆ ತಕ್ಕ ಒಂದು ವರಾ ಹುಡಿಕಿ ಮದಿವಿ ಮಾಡಿದರ– ಅಲ್ಲ ಕೇಳತೇನಿ ನಿನ್ನ, ಹೇಗೆ ಆದೀತು ಅಂತ.

ಪುಟ್ಟವ್ವ:—ಅಂಥ ಅವಸರ ಏನದ ಈಗ ಆಕೀ ಮದಿವೀದು? ಇನ್ನೂ ಈಗ ದೇವರು ಅಂತ ೧೩ ತುಂಬ್ಯಾವ. (ಮಗಳಿಗೆ) ಪದ್ದವ್ವಾ, ಕಾದವೇನು ಮಗು, ಹಾಲು?

ರಾಯರು:— (ಕೆರಳಿ) ಒಂದೇ ಚಿತ್ತದಿಂದ ಕೇಳ ತೀಯೋ, ಏನು ಹಾಲು ಹಾಲು ಅಂತ ಬಡ ಬಡಸತಿಯೊ ? ದೇವರs ಅಂತ ೧೩ ತುಂಬ್ಯಾವ ಅಂತೀದಿ, ಅದಕ್ಕ ನಾನು ಅವಳ ಮದಿವಿಮಾಡಬೇಕು ಅಂಬೋದು.

ಪುಟ್ಟವ್ವ:— ಅದಕ್ಕಂತ ನಾನು ಬೇಡಾ ಅಂಬೋದು. (ಸಿಟ್ಟಿನಿಂದ) ಈ ಹಾಳು ಹರಟಿ ತೆಗೆದುಕೊಂಡು ನನಗೆ ಏನು ಮಾಡೋದು, ಒಳಗೆ ಇನ್ನೂ ಹಾಲಿಗೆ ಹೆಪ್ಪು ಹಾಕ ಬೇಕಾಗೇದ. ನೀವೇನೋ ನಿಮ್ಮ ಮದವಿ ಏನೋ !

ರಾಯರು:— ಅಲ್ಲೆ, ನಿನ್ನ ಮಾತಿನಂತೆ ಮದಿವಿ ವಿಚಾರ ಬೇಡಾ ಅಂತ ತಿಳಿ, ಮುಂದ ಏನು ?

ಪುಟ್ಟವ್ವ:—ಮುಂದೇನು ? ಮುಂದ ಇನ್ನೂ ವರ್ಷೆರಡು ವರ್ಷ ಕಲೀಲಿ ನಮ್ಮ ಪದ್ದು. ನಮ್ಮ ಪದ್ದು ಏನು ಅಂಥಾ ಇಂಥಾಕಿ ಅಲ್ಲಾ. ಬಹಾಳ ಶಾಣ್ಯಾಕಿ ಇದ್ದಾಳ.

ರಾಯರು:—ಎಷ್ಟು ಕಲಿತರೆ ಏನು ? ಅವಳಿಗೇನು ಮದಿವಿಮಾಡಿಕೊಳ್ಳೋದು ಬಿಟ್ಟದ್ದ ಬೇರೆ ಅಲ್ಲಲ್ಲ.

ಪುಟ್ಟವ್ವ:— (ಕೆರಳಿ) ಅದಕ್ಕೇ ಗೇಣ ಹುಡಗೀದು ಮದಿವಿ ಮಾಡಬೇಕಂತೀರಾ ? ಬೇಕಾದ್ದ ಆಗಲಿ ಈಗ ಅಂತೂ ಅವಳ ಮದಿವಿ ಆಗೋ ಹಾಗೆ ಇಲ್ಲ.

ರಾಯರು:— ನಮ್ಮ ಶಾಸ್ತ್ರ, ನಮ್ಮ ಪುರಾಣ, ನಮ್ಮ ವೇದಾ ಎಲ್ಲಾ ಹೇಳತಾವ ಹೆಂಣು ಹುಡಿಗೆಯರ ಮದಿವಿ ಎಂಟು ವರ್ಷಕ್ಕೆ ಮಾಡಬೇಕು ಅಂತ. ದಿನಾಲು ಪುರಾಣ ಕೇಳೋ ನಿನಗೆ ನಾನು ಹೇಳಬೇಕ ಇದನ್ನ.

ಪುಟ್ಟವ್ವ:— ಅಯ್ಯ ಪುರಾಣ! ಪುರಾಣದೊಳಗೇ ಹೇಳಿಲ್ಲ, ಸೀತಾನ ಮದಿವಿ ಆದದ್ದನ್ನು. ಅದೇನೋ 'ಸ್ವಯಂವರ' ಅಂತ. ತನ್ನ ಗಂಡನ್ನ ತಾನೇ ಆರಿಸಿಕೋ ಬೇಕಂತ. ಅಲ್ಲ ನೀವೇ ಹೇಳಿರಿ ಅವರ ವಯಸ್ಸು ಎಂಟು ಇದ್ದಳ ತಮ್ಮ ತಮ್ಮ ಗಂಡಂದಿರನ್ನು ತಾವೇ ಹೇಗೆ ಆರಿಸಿ ಕೋತಿದ್ದರು ?

ರಾಯರು:— ಅರ್ಥ ಇಲ್ಲದ್ದಕ್ಕೆ ಪುರಾಣ ಕೇಳೋದು ಅಂತಾರ- ಅದು ಸುಳ್ಳಲ್ಲ ನೋಡು. ಸ್ವಯಂವರ ಆದದ್ದು ಸೀತಾಂದು ಅಲ್ಲ. ಜನಕಂದು. ' ಬಿಲ್ಲ ಮುರದವರಿಗೆ ಸೀತಾನ್ನ ಕೊಡತೀನಿ ' ಅಂತ ಸಾರಿದವನು ಜನಕ. ತ್ರೇತಾ ಯುಗದೊಳಗೆ ಆದದ್ದು ಆಗಿ ಹೋತು ಅನ್ನು. ಆದರೆ ಈಗಿನ ಕಲಿಯುಗದೊಳಗೆ ನಮ್ಮ ಪದ್ದೀನೂ ಸ್ವಯಂವರ ಮಾಡಿಕೊಳ್ಳಿ ಅಂತೀದಿ ಏನು ನೀನು ?

ಪುಟ್ಟವ್ವ:— ನಾನು ಏನು ಅಂತೀನೋ ಏನೋ ? ನಾನು ಅಂಬೊದು ಇಷ್ಟೇ-(ಒಳಗೆ ನೋಡಿ) ಕಾದಿದ್ದರೆ ಇಳಿಸಿ ಬಿಡು ಪದ್ದಾ—ಇನ್ನೂ ಸಂಣಾಕಿ ಇದ್ದಾಳ. ಈಗ ಮದಿವಿ ಬೇಡಾ ಅಂತೀನಿ. ಇದೂ ಅಲ್ಲದೆ, ಇದ್ದ ಒಬ್ಬ ಮಗಳನ್ನು ಮದಿವಿಮಾಡಿ ಅತ್ತೀಮನಿಗೆ ಕಳಿಸಿ ನಾನು ಆಡಲ್ಯಾ ಕೂಸು ಆಗಿ. ಅದಕ್ಕೆ ಹೇಳಿದೆ ಇನ್ನೂ ವರ್ಷೆರಡು ವರ್ಷ ಹೋಗಲಿ, ಆಮೇಲೆ ಮಾಡಿದರೆ ಬಂದೀತು ಮದವಿ ವಿಚಾರ ಅಂತ.

ರಾಯರು:— ಅಲ್ಲ. ವರ್ಷೆರ್ಡುವರ್ಷದೊಳಗೆ ಜನರು ನನ್ನ ಈ ಊರಾಗ ಇರಗೊಡೋದಿಲ್ಲ, ಮಗಳ ಮದಿವಿ ಮಾಡದಿದ್ದರ.

ಪುಟ್ಟವ್ವ:— (ಏನೂ ತಿಳಿಯದೆ) ನಮ್ಮ ಮಗಳ ಮದಿವಿ ನಾವು ಮಾಡದಿದ್ದರ ಜನರದು ಏನು ಲುಕ್ಸಾನ ಆಗತದೋ ಏನೋ? ಅದೂ ಹೋಗಲಿ, ಈ ಜನರಿಗೆ ಮಂದೀಮನಿ ಕಾರಭಾರ ಯಾಕ ಅಂತೀನಿ.

ರಾಯರು:— ಅಲ್ಲ, ಅವರೇನು ನಮಗ ಕೇಡು ಆಗಲಿ ಅಂತ ಹೇಳತಾರ ಏನು? ಇಲ್ಲಿ ನೋಡು. ಹೆಂಣು ಹುಡುಗೆ ಯರನ್ನು ಬಹಾಳ ಬೆಳಿಸಬಾರದು ಅಂತ ಮೊದಲಿಸಿಂದ ಹೇಳಿಕೋತಾ ಬಂದಾರ ನಮ್ಮ ಹಿರಿಯರು. ಹೆಣ್ಣು ಹುಡು ಗೆಯರನ್ನು ಬೆಳಿಸೋದು ಅಂದರೆ ಮಹತ್ಪಾಪ—ಅದರಿಂದ ಅವರ ರೀತಿನೀತಿ ಕೆಡೋ ಸಂಭವ ಇರತದ ಇದಲ್ಲದೆ ನೋಡು ನಮ್ಮ ಕೈಯೊಳಗೆ ಇರೋ ಕೆಲ್ಸಕ್ಕ ಮಂದಿ ಕಡಿಂದ ಯಾಕ ಅನ್ನಿಸಿಕೋಬೇಕು?

ಪುಟ್ಟವ್ವ:— ಅಯ್ಯ ಮಂದೆ? ಮಂದಿ ಅಂದದ್ದನ್ನೆಲ್ಲಾ ಕೇಳಿಕೋತ ಹೋದರ ಮುಗಿದೇ ಹೋಯಿತಲ್ಲ. ಜನರಿಗೆ ಏನು, ಮುಂದ ಓಡು ಅಂತಾರ ಹಿಂದ ಹಿಡಿ ಅಂತಾರ. ಜನರ ಮಾತು ಕೇಳಿ ಇದ್ದ ಒಂದು ಜೀವದ ಕರಳನ್ನು ಮನಿ ಬಿಡಸ್ತಾರ ಯಾರಾದರೂ?

ರಾಯರು:— (ಸಿಟ್ಟಿನಿಂದ) ಮನಿಬಿಡಿಸಬೇಕು ಅಂತ ಯಾರು ಅಂದರು ಈಗ.

ಪುಟ್ಟವ್ವ:—(ಅಣಕಿನಿಂದ) ಇಲ್ಲ ಇಲ್ಲ. ಮದಿವಿ ಮಾಡಿ ಅತ್ತೀಮನಿಗೆ ಕಳಿಸಿದರೆ ಮನೀವಳಗ ಇಟಗೊಂಡ ಹಾಗಾ ಯಿತಲ್ಲ!

ರಾಯರು:— (ನಿರ್ಧಾರದಿಂದ) ಅದು ಏನು ಬೇಕಾದಷ್ಟು ಇರಲಿ. ನಾಳಿನ ವೈಶಾಖದಾಗ ನಾನು ಪದ್ಮಾನ ಮದಿವಿ ಮಾಡೇ ತೀರೋ ಅವ.

ಪುಟ್ಟವ್ವ:— (ಏನೋ ನೆನಪಾದವಳಂತೆ) ಅಲ್ಲ, ಮದಿವಿ ಮಾಡುವಿರಂತೆ, ಆದರೆ ಅವಳಿಗೆ ೧೪ ತುಂಬಲಿ ಅಲ್ಲ. ೧೪ ರ ಕಿಂತ ಮೊದಲ ಮದಿವಿಮಾಡಿ ಮನಿಗೆ ಎರವಾಗಬೇಕು. ಅಂತ ಮಾಡೀರೋ ಏನು? ಮೊನ್ನೆ ನೋಡಲಿಲ್ಲ. ಆ ಮದಿವಿ ಕಾಯದೆ ಮುರಿದು ಮಗಳ ಮದಿವಿ ಮಾಡಿ ಶೀಕ್ಷೆ ಆದದ್ದು ಆ ರಾಮಭಟ್ಟರಿಗೆ?

ರಾಯರು:—ಅಂತಾವು ಸಾವಿರದೊಳಗ ಒಂದು ಉದಾಹರಣೆ ಹುಚ್ಚಿ. ಅಂಥಾವೆಲ್ಲ ನೋಡಿ ಮಕ್ಕಳ ಮದಿವಿ ಮುಂದೆ ಹಾಕೋದು ಅಂದರೆ ಕೇವಲ ಧಡ್ಡತನ-ಅವಿಚಾರ.

ಪುಟ್ಟವ್ವ:—(ಹಟದಿಂದ) ಹಾಗಾದರೆ ಇನ್ನೂ ಎರ್ಡು ವರ್ಷ ಅಂತೂ ನಾನು ಅವಳ ಮದಿವಿ ಮಾಡಗೊಡೋದಿಲ್ಲ.

ರಾಯರು:— (ನಿರ್ಧಾರದ ಸಿಟ್ಟಿನಿಂದ ನಾಳಿನ ವೈಶಾಖದೊಳಗೆ ಮದಿವಿ ಆಗಲಿಕ್ಕೇ ಬೇಕು.

ಪುಟ್ಟವ್ವ:— ಒಂದು ವ್ಯಾಳ್ಯೆಕ್ಕೆ ಆಗದಿದ್ದರೆ—

ರಾಯರು:— (ಗದ್ದರಿಸುವರು)

ಪುಟ್ಟವ್ವ:—ಅಲ್ಲ, ಪದ್ಮೂನ ಒಲ್ಲೆ ಅಂದರ—

ರಾಯರು:— (ನಡುವೆ ಸಿಟ್ಟಿನಿಂದ) ಆಗದಿದ್ದರೆ— ಪದ್ಮೂನ ಒಲ್ಲೆ ಅಂದರೆ-ಹೆದರಿಕೆ ಹಾಕತೀಯೇನು ನನಗೆ? ಇಬ್ಬರೂ ಹೊರಗ ಹೋಗಬೇಕಾಗತದ ಅಂದೆ-

ಪುಟ್ಟವ್ವ:— ಆದಕ್ಕ ನಾನು ಒಂಟಕಾಲ ಮೇಲೆ ಸಿದ್ಧ ಇದ್ದೀನಿ. ಅತ್ತಿ ಇಲ್ಲದ ಮನಿ ಸಿಕ್ಕಿತು ಹುಡಿಗ್ಗೆ (ರಾಯರು

ಅವಳನ್ನು ಸಿಟ್ಟಿನಿಂದ ನೋಡಲು) ಕಡಿತನಕಾ ಅಂತ ತಿಳಿದುಕೋತಿನಿ. ಇದ್ದ ಒಬ್ಬ ಮಗಳನ್ನು ಸಣ್ಣ ವಯಸ್ಸಿನೊಳಗ ಮದಿವಿ ಮಾಡಿ ಅತ್ತಿಮನಿಗೆ ಕಳ್ಸಿ ಗೂಗಿ ಹಾಗೆ ಇರೋದರಕಿಂತ ಅವಳನ್ನು ಇಟಗೊಂಡು ಬೇರೆ ಇರೋದು ಏನೂ ಕೆಟ್ಟ ಅಲ್ಲ-

ರಾಯರು:—( ಅವಳ ಮಾತಿನ ಕಡೆ ಲಕ್ಷ ಇಲ್ಲದೆ ) ಇಬ್ಬರೂ ಹೊರಗೆ ಅಂದೆ-

—ತೆರೆ.

## ೨

[ಮೂರು ನಾಲ್ಕು ವರುಷಗಳ ತರುವಾಯ ಅದೇ ಊರಲ್ಲಿ ಇನ್ನೊಂದು ಮನೆ, ಅದಕ್ಕೆ ಪದ್ಮಾವತಿಯ ಮನೆ ಎನ್ನಬಹುದು. ಅದೇ ಮನೆಯಲ್ಲಿಯ ಒಂದು ಕೋಣೆ. ಪ್ರೇಕ್ಷಕರ ಎಡಬದಿಗೆ ಹೊರಗೆ ಹೋಗುವ ಬಾಗಿಲು. ಈ ಬಾಗಿಲಿನ ಹತ್ತರ ಒಂದು ಆರಾಮ ಖುರ್ಚಿ (Easy chair) ಕೋಣೆಯ ಮಧ್ಯದಲ್ಲಿ ಹಾರ್ಮೋನಿಯಮ್ ಮುಂತಾದ ವಾದ್ಯದ ವಸ್ತುಗಳು ಕಾಣಿಸುವವು. ಸಮಯ ಮುಂಜಾವಿನ ೮॥ ಘಂಟೆ. ತೆರೆಯು ಮೇಲಕ್ಕೆ ಏಳುವಾಗ್ಗೆ ಪದ್ಮಾವತಿಯು Easy chair ನ ಮೇಲೆ ಬಿದ್ದುಕೊಂಡಿದ್ದಾಳೆ. ಸ್ವಲ್ಪ ಹೊತ್ತಿನ ತರುವಾಯ—

ಪುಟ್ಟವ್ವ:— (ಪ್ರವೇಶಿಸಿ) ಏನೆ ಪದ್ದು, ಒಬ್ಬಾಕೀನ ಕೂತೀ ಅಲ್ಲ ?

ಪದ್ದು:— ಇಲ್ಲದ್ದು ಜೋಡು ಎಲ್ಲೀದ ತರಲೆವ್ವಾ ಇನ್ನ ?

ಪುಟ್ಟವ್ವ:— ಹಾಂಗ ಅಲ್ಲೆ. ಒಬ್ಬಾಕೀನ ಸುಮ್ಮನ

ಕೂತಿದ್ದಿ, ನೀನು ಮನೀವಳಗಾರ ಇದ್ದೀದ್ಯೋ ಇಲ್ಲೋ ಅಂತ ತಿಳಕೊಂಡಿದ್ದೆ ನಾನು.

ಪದ್ದು:— ಮನಿ ಬಿಟ್ಟು ಎಲ್ಲಿಗೆ ಹೋಗಲಿ ಸುಡಗಾಡಿಗೆ.

ಪುಟ್ಟವ್ವ:— (ನೊಂದುಕೊಂಡು) ಹೀಗೆ ಯಾಕೆ ಕೆಟ್ಟ ಕೆಟ್ಟ ಮಾತನಾಡತೀಯೇ ? ಮನಿ ಬಿಟ್ಟು ಹೋಗೋದು ಅಂದರ ಸುಡಗಾಡಿಗೇನ ಏನು ? ಅದು ಇರಲಿ ಬಿಡು. ಆ ದೇಶಪಾಂಡೇರ ಸುಶೀಲಾ ಇನ್ನೂ ಯಾಕೆ ಬಂದಿಲ್ಲ, ೮|| ಆದರೂ.

ಪದ್ದು:—ಅವಳು ಬರೋದೇ ಇಲ್ಲ, ಅವ್ವ ಇನ್ನ.

ಪುಟ್ಟವ್ವ:— ಬರೋದಿಲ್ಲ, ಅದು ಯಾಕೆ ?

ಪದ್ದು:— ಯಾಕ ಏನು ? ಆಕೀದು ಮದಿವಿ ಆಗೋದು ಅದ ಅಂತ. ಅವರ ತಂದಿ ಬಂದಿದ್ದರು 'ಇನ್ನು ಕಲಿಯೋದು ಸಾಕು' ಅಂತ ಹೇಳಿದರು.

ಪುಟ್ಟವ್ವ:— ಅಯ್ಯ, ಎಂಥಾ ಶ್ಯಾಣ್ಯಾದ ಇತ್ತಲ್ಲ ಹುಡಿಗಿ ! ಈಗ ಬಿಡಿಸಬೇಡಿರಿ ಕಲಿಯೋದು ಅಂತ ಹೇಳ ಬಾರದಾಗಿತ್ತೇನ ನೀನು ?

ಪದ್ದು:— ನಾನು ಏನೂ ಹೇಳಲಿಲ್ಲವ್ವಾ.

ಪುಟ್ಟವ್ವ:— ಅವರು ನಿನಗ ಹೇಳೋದು ನನಗ ಹೇಳಿದ್ದರ—

ಪದ್ದು:— (ನಡುವೆ) ಕಲಿಸೋ ಆಕಿ ನಾನು ಅಂತ ನನಗ ಹೇಳಿದರು. ಸಮ್ಮಂದಿಲ್ಲಾ ಸೂತ್ರ ಇಲ್ಲಾ ನಿನಗ ಯಾಕ ಹೇಳತಾರ ಹೇಳು.

ಪುಟ್ಟವ್ವ:— ನನ್ನ ನಿನ್ನ ಸಮ್ಮಂಧ ಅದ ಅಂತ.

ಪದ್ದು:— ನನ್ನ ನಿನ್ನ ಸಮ್ಮಂಧ ಅವರಿಗೆ ಪೂರ್ಣ ಗೊತ್ತ ಇತ್ತೂ ಅಂತ ಹೇಳಲಿಲ್ಲ ನಿನಗೆ.

ಪುಟ್ಟವ್ವ:— ಅಂದರೆ ಏನೆ ?

ಪದ್ದು:— ನಿನಗೆ ಹೇಳಿದ್ದರೆ ನಿನ್ನ ಹಾಗೆ ಅವರ ಹೆಂಡತೀನೂ ತಮ್ಮನ್ನು ಬಿಟ್ಟು ಬೇರೆ ಇರಬಹುದು ಅಂತ ಹೆದರಿ ಹೇಳಲಿಲ್ಲ.

ಪುಟ್ಟವ್ವ:— ಸಾಕು ಬಿಡೆ, ಏನಾದರೂ ಒಂದ ಮಾತ ನಾಡಬೇಡ. ಏನೆ ಇರಲಿ. ನೀನು ಅಂತೂ ಈಗ ಬಿಡಿಸಬೇಡಿರಿ ಕಲಿಯೋದು ಅಂತ ಹೇಳಬೇಕಾಗಿತ್ತು.

ಪದ್ದು:— ಯಾಕ ಹೇಳಬೇಕು ಹೇಳು ? ಎಲ್ಲಿ ಆದರೂ ಮದಿವಿ ಮಾಡಿಕೊಂಡು ಸುಖದಿಂದ ಇದ್ದಳು ಅಂದರ ಒಬ್ಬಾಕೀನ ಇರೋ ತ್ರಾಸ ಆದರೂ ತಪ್ಪೀತು,

ಪುಟ್ಟವ್ವ:—ಈಗ ನಿನ್ನ ಮದಿವಿ ಆಗಿಲ್ಲ; ಆದರೆ ನೀನು ಒಬ್ಬಾಕೀನ ಎಲ್ಲಿ ಇದ್ದೀ ಹೇಳು.

ಪದ್ದು:— ನನ್ನ ಹಾಗೆ ಜೋಡು ಆಗಿ ಇರೋದು ಬೇಡಾಗೇದ ಅವಳ ತಾಯಿಗೆ. ನಿನಗೆ ನಾನು ಹೀಗೇ ಇರಬೇಕು ಅಂತ ಇತ್ತು- ನಾನು ಹೀಗೆ ಇದ್ದೀನಿ.

ಪುಟ್ಟವ್ವ:— ಹೀಗೆ ಅಂದರೆ ಹೇಗೆ ?

ಪದ್ದು:— ಮದಿವಿ ಆಗದೆ-

ಪುಟ್ಟವ್ವ:—ಹೌದು. ಲಗು ಮದಿವಿ ಆದರೆ ನನ್ನನ್ನು ಬಿಟ್ಟು ಹೋಗತೀದಿ ಅಂತ—

ಪದ್ದು:— (ಒಮ್ಮೆಲೆ) ಮದಿವಿ ಬಿಡಿಸಿದಿ ಅಲ್ಲ ?

ಪುಟ್ಟವ್ವ: —ಅಯ್ಯ, ನಿನಗ ಕೆಡಕು ಆಗಲಿ ಅಂತ

ಮಾಡಿದೆನೋ ಏನೋ ನಾನು. ಅವರು ಹೇಳಿದ್ದು ಕೇಳಿ ಆಗ ನಿನ್ನ ಮದಿವಿಗೆ ಒಪ್ಪಿದ್ದರೆ—

ಪದ್ದು:— (ನಡುವೆ ಬಾಯಿಹಾಕಿ) ಅವ್ವಾ, ಆದದ್ದು ಆಗಿಹೋತು. ಈಗ ಅದನ್ನು ತೆಗೆದುಕೊಂಡು ಏನು ಮಾಡೋದು ಹೇಳು ?

ಪುಟ್ಟವ್ವ:— 'ಏನು ಮಾಡೋದು' ಅಂದರೆ ಹೇಗೆ ಹೇಳು. ಅವರ ಮನಸ್ಸಿನೊಳಗ ನಿನ್ನ ಮದಿವಿ ಮಾಡೋದು ಇತ್ತು. ನಿನ್ನ ಮನಸ್ಸಿನೊಳಗೂ ಇತ್ತೋ ಏನೋ ?

ಪದ್ದು:— ಆಗ್ಗೆ ನನ್ನ ಮನಸ್ಸಿನ ವಿಚಾರ ಮಾಡಿದ್ದರೆ-

ಪುಟ್ಟವ್ವ:— ಆಗ್ಗೆ ವಿಚಾರ ಮಾಡಿದ್ದರೆ ಹೀಗೆ ಎಲ್ಲಿ ಆಗತಿತ್ತವ್ವ? ಅವರು ಆಗ ಹೇಳಿದರು 'ನಿನಗ ತಿಳೀಲಿಕ್ಕಿಲ್ಲಾ ಈಗ ಮದಿವೀ ಮಾಡೋಣ' ಅಂತ. ಅವರ ಮಾತು ಕೇಳಿದ್ದರೆ—

ಪದ್ದು:— ಏನು ಆಗತಿತ್ತು ಕೇಳಿದ್ದರ ? ಮಂದಿ ಸಮಾಧಾನ ಆಗತಿತ್ತು.

ಪುಟ್ಟವ್ವ:—ನಿನ್ನ ಮದಿವಿ ಆಗಿದ್ದರೆ ಮಂದಿ ಸಮಾಧಾನ ಆಗತಿತ್ತ ? ಅದು ಹೇಗವ್ವ.

ಪದ್ದು:— ಆತನು ಮದಿವಿ ಯಾಕ ಮಾಡಬೇಕು ಅಂತಿದ್ದ ? ಬೆಳದ ಮಗಳ ಮದಿವಿ ಮಾಡದಿದ್ದರೆ ಜನರು ತನ್ನ ಆಡಿಕೊಳ್ಳತಾರ ಅಂತಾ ತಿಳಿದು ನನ್ನ ಮದಿವಿ ಮಾಡಬೇಕು ಅಂದದ್ದು. ಯಾಕ, ಯಾರ ಸಮಾಧಾನ ಆಗತಿತ್ತು ತನ್ನದೋ ಮಂದಿದೋ ?

ಪುಟ್ಟವ್ವ:—ಅದೆಲ್ಲ ಸುಳ್ಳು ಪದ್ದವ್ವ. ನಿನ್ನ ಹಿತದ ಸಲುವಾಗೀನೇ ಅವರು ನಿನ್ನ ಮದಿವಿ ಮಾಡಬೇಕು ಅಂದದ್ದು

ಪದ್ದು:— ಅಯ್ಯ ನನ್ನ ಹಿತಾನ! ನನ್ನ ಹಿತದ ಸಲುವಾಗಿ ಕಾಳಜಿ ಮಾಡೋ ಅವರು ತಮ್ಮ ಹಟದ ಸಲುವಾಗಿ ಮದಿವಿ ಮಾಡೋದು ಬಿಡತಿದ್ದರ?

ಪುಟ್ಟವ್ವ:—ಅವರ ಹಟಾನ?

ಪದ್ದು:—ಅವರದು ಒಂದೇ ಅಲ್ಲ, ನಿನ್ನದೂ ಹಟಾ ಸಾಧಿಸಿದ ಹಾಗಾಯಿತು.

ಪುಟ್ಟವ್ವ:—ನನ್ನದೇನ ಹಟಾನ?

ಪದ್ದು:—ಹೇಳಲಿಕ್ಕೆ ಬೇಕೇನು ನಾನು? ನಿನ್ನ ಮಾತು ನಡೀಲಿ ಅಂತ ನೀನು, ತನ್ನ ಗೌರವ ಉಳಿಲಿ ಅಂತ ಆತ. ಹೀಗೆ ಇಬ್ಬರೂ ಕೂಡಿ ಮಾಡಿದ್ದೇನು ಅಂದರೆ—

ಪುಟ್ಟವ್ವ:— (ಸಮಾಧಾನಮಾಡುತ್ತ) ಅಯ್ಯ ಪದ್ದಾ, ಏನು ಆಗೇದ ಇವತ್ತ ನಿನಗ?

ಪದ್ದು:— (ಒಮ್ಮೆಲೆ ಎಚ್ಚತ್ತವಳಂತೆ) ಆಂ, ಏನಂದಿ? ಏನಾಗೇದ-ಹಾಗೆ ನೋಡಿದರ ಏನೂ ಆಗಿಲ್ಲ- ಏನೂ ಆಗಿಲ್ಲಾ ಅಂತೀಯಾ ಒಂದೂ ಕೆಲ್ಸಕ್ಕ ಉತ್ಸಾಹನ ಇಲ್ಲ—ಈಗ ನೀನು ಬರೋದಕ್ಕಿಂತ ಮುಂಚೆ ಬಹಾಳ ಅಂದರ ಬಹಾಳ ಬೇಸರ ಬಂದಿತ್ತು-ಒಂದು ಸ್ವಲ್ಪ ಪೇಟಿ ಆರ ಬಾರಿಸೋಣಾ ಅಂತ ಕೂತೆ. ಖೋಡಿ ಒಟ್ಟು ಆಡಲಿಲ್ಲ ಪೇಟಿ ಮೇಲೆ. ಆ ಮೇಲೆ ಏನೋ ಬೇಸರ ಹೆಚ್ಚಿತು. ಬಂದು ಬಿದ್ದುಕೊಂಡೆ ಈ ಕುರ್ಚಿ ಮೇಲೆ......... ಸುಶೀಲಾ ಅರ ಬರತಿತ್ತು ದಿನಾ–ಒಂದು ಜೋಡು ಇದ್ದ ಹಾಗೆ ಇತ್ತು. ಇನ್ನು ಆಕೀನೂ ಬರೋದಿಲ್ಲ. ಇನ್ನು ಮೇಲೆ ನಾನು ಒಬ್ಬಾಕೀನೇ ಕಾಲಕಳೀಬೇಕು. (ತಾಯಿಯು ಏನನ್ನೋ ಮಾತನಾಡಬೇಕೆನ್ನುವಷ್ಟರಲ್ಲಿ) ನೀನು ಏನೂ ಮಾತನಾಡ

ಬೇಡ. ನನಗೆ ಗೊತ್ತದೆ ನೀನು ಏನು ಹೇಳಬೇಕಂತ ಮಾಡೀದಿ ಅನ್ನುವದು. 'ನಾನು ಜೋಡು ಇದ್ದೀನಿ ಅಲ್ಲ' ಅಂತ ನೀನು ಹೇಳುವದು.... ಆದರೆ ನೀನೇ ಹೇಳು, ನೀನು ಹೇಗೆ ನನಗೆ ಜೋಡು ಆದೀ ಹೇಳು .... ನಿನಗ ಅನುಭವ ಅದ; ನನಗೆ ಇಲ್ಲ....ಅನುಭವ ಇದ್ದವರಿಗೂ ಅನುಭವ ಇಲ್ಲದವರಿಗೂ ಹೇಗೆ ಜೋಡು ಆದೀತು ?

ಪುಟ್ಟವ್ವ : — ( ನೊಂದುಕೊಂಡು ) ಹೀಗೆಲ್ಲ ಮಾತ ನಾಡಬೇಡ, ಹೇಳು ನಿನಗೆ ಏನು ಬೇಕಾಗಿದೆ ಹೇಳು, ನೀನು ಹೇಳಿದ್ದನ್ನು ಮಾಡತೇನಿ. ನೀನು ಬೇಡಿದ್ದನ್ನು ಕೊಡತೇನಿ.

ಪದ್ದು : — ನಾನು ಹೇಳಿದ್ದನ್ನು ? – ನಾನು ಹೇಳಿದ್ದನ್ನು ನೀನು ತಿಳಿದುಕೊಳ್ಳಲಾರಿ. ಒಂದು ವೇಳೆ ತಿಳಿದು ಕೊಂಡರೂ ನಿನಗೆ ಅದರಂತೆ ಮಾಡುವದು ಶಕ್ಯವಿಲ್ಲ........ ಆ........ಏನು ? ನನಗ ಬೇಕಾದ್ದನ್ನು ಕೊಡತೀದಿ ? ಕೊಡೋದು ಇನ್ನು ಮೇಲೆ ಶಕ್ಯವಿಲ್ಲ. ಮಗಳ ಮೇಲಿನ ಪ್ರೇಮದಿಂದ ಮದಿವಿ ಮುಂದಹಾಕಿಸಿದಿ – ಆದರೆ – ಆದರೆ ಬೆಳೆದ ಮಗಳನ್ನು ಮದವೀ ಮಾಡಿಕೊಂಡಾರೋ ಇಲ್ಲೋ ಅಂಬೋ ವಿಚಾರ ಆಗ ನಿನಗ ಬರಲಿಲ್ಲ. ಇಷ್ಟು ದಿವಸ ನೀನು ಮಾಡೋದನ್ನು ಮಾಡಿದಿ....ಇನ್ನುಮೇಲೆ....ಇನ್ನು ಮೇಲೆ........

ಪುಟ್ಟವ್ವ : — ಇನ್ನು ಮೇಲೆ ಏನು ? ಏನು ಬೇಕಾಗೇದ ಹೇಳು.

ಪದ್ದು:— ಇನ್ನುಮೇಲೆ ನನಗೆ ಬೇಕಾದದ್ದು....ಬೇಕಾದದ್ದು... ನನಗೇ ಗೊತ್ತು ಇಲ್ಲಾ. (ಎಂದು ಬಿಕ್ಕುವಳು )

—ತೆರೆ.

೩

[ಹಿಂದಿನ ಪ್ರವೇಶದಲ್ಲಿಯ ಮನೆ. ತೆರೆಯು ಮೇಲಕ್ಕೇಳುವಾಗ್ಗೆ ಪ್ರೇಕ್ಷಕರ ಬಲಬದಿಗೆ— ಅಂದರೆ ಒಳಕ್ಕೆ ಹೋಗುವ ಬಾಗಿಲಿನ ಹತ್ತಿರ ಪುಟ್ಟವ್ವನು ಕುಳಿತಿದ್ದಾಳೆ. ರಂಗಸ್ಥಳದ ಮಧ್ಯದಲ್ಲಿ ರಾಯರು ಕುಳಿತಿದ್ದಾರೆ. ತೆರೆಯು ಮೇಲಕ್ಕೆದ್ದು ಸ್ವಲ್ಪ ಹೊತ್ತಿನ ವರೆಗೆ ನಿಃಶಬ್ದತೆ. ಮುಂದೆ ರಾಯರು ಪುಟ್ಟವ್ವನ ಕಡೆಗೂ ಪುಟ್ಟವ್ವನು ರಾಯರ ಕಡೆಗೂ ಒಂದೆರಡು ಸಲ ನೋಡುವರು. ಆಮೇಲೆ]

ರಾಯರು:— ನಾನು ಮೊದಲೇ ಹೇಳಲಿಲ್ಲ ನಿನಗೆ, ಪದ್ದಿ ಮದವಿ ಮಾಡಿಬಿಡೋಣ ಅಂತ

ಪುಟ್ಟವ್ವ:— ಹೌದು, ಹುಡುಗಿ ಸಂಣದು, ಇಷ್ಟು ಅವಸರ ಯಾಕ ಅಂದೆ.

ರಾಯರು:— (ಅಣಕಿನಿಂದ) 'ಅವಸರ ಯಾಕ ಅಂದೆ!' ಆಗ್ಗೆ ಅವಸರ ಮಾಡಿದ್ದರೆ ಈಗ್ಗೆ ಈ ಸ್ಥಿತಿ ಎಲ್ಲಿ ಬರತಿತ್ತು. ಅವಳೂ ಸುಖದಿಂದ ತನ್ನ ಮನಿವಳಗ ಇರತಿದ್ದಳು. ನಾವೂ ನಮ್ಮ ಮನೀವಳಗ ಸುಖದಿಂದ ಇರತಿದ್ವಿ.

ಪುಟ್ಟವ್ವ:— ಇರ್ರಿ ಅಲ್ಲ ಸುಖದಿಂದ, ನಿಮಗೆ ಯಾರು ಬೇಡ ಅಂದರು.

ರಾಯರು:— ಮಾಡೋದು ಇಂಥಾ ಕಾರಭಾರ. ಮೇಲೆ ಯಾರು ಬೇಡಾ ಅಂದರು? ನಿನ್ನ ಕೆಲಸ ಎಲ್ಲ ಹೀಗೆ. ನಿನಗೂ ಸುಖಾ ಇಲ್ಲ, ಮಂದಿಗೂ ಸುಖಾ ಇಲ್ಲ. ನಿನ್ನ ಮಾತ ಕೇಳಿ ಮದಿವಿ ಬಿಟ್ಟದ್ದರಿಂದ ಊರೊಳಗೆ ನನ್ನ ಹೆಸರು ಕೆಟ್ಟಿತು.

ಪುಟ್ಟವ್ವ:— ಹೆಸರು ಕೆಡಲಿಕ್ಕೆ ಏನಾಯಿತು?

ರಾಯರು :— ದೊಡ್ಡಿಸ್ತನಾ ಮಾಡಿಕೊಂಡು ಇದ್ದ ಊರೊಳಗೆ ಬೇರೆ ಇರಲಿಕ್ಕೆ ಹತ್ತಿದಿರಲ್ಲಾ ತಾವು, ಮಗಳನ್ನು ಇಟಗೊಂಡು.

ಪುಟ್ಟವ್ವ:— ಇದೇ ಅಹುದಲ್ಲೋ, ಮತ್ತ ನಾನು ಇನ್ನೂ ಎಷ್ಟೆಷ್ಟು ಆದನೋ ಅಂತ ಮಾಡಿದ್ದೆ.

ರಾಯರು:— ಇಷ್ಟೇ ಅಲ್ಲ. 'ಬೆಳದ ಹುಡಿಗಿ ಮದವಿ ಮಾಡಲಿಲ್ಲ' ಅಂತ ಜನರು ಆಡಿಕೊಳ್ಳಲಿಕ್ಕೆ ಹತ್ತಿದರು. 'ಮುದವಿ ವಯಸ್ಸಿನಾಗ ಮದವಿ ಬಿಟ್ಟ ನಮ್ಮಪ್ಪ' ಅಂತ ಹುಡಿಗೆ– 'ನಾನು ಹೇಳಿದ ಹಾಗೆ ಕೇಳಲಿಲ್ಲ' ಅಂತ ನೀನು, ಹೀಗೆ ಎಲ್ಲರೂ ಸಿಟ್ಟು ಆದಿರಿ ನನ್ನಮೇಲೆ. ಜನರು ಆಡಿಕೊಳ್ಳುವದರ ಕಡೆ ಲಕ್ಷಕೊಡದಿದ್ದರೆ ಲೌಕಿಕ ಹಾಳು– ಇತ್ತ ನಿಮ್ಮ ಸಿಟ್ಟಿನಕಡೆ ದುರ್ಲಕ್ಷ ಮಾಡಿದೆನೇ ಪ್ರೇಮ ಹಾಳು. ಪ್ರೇಮದಕಿಂತ ಲೌಕಿಕ ಹೆಚ್ಚಿನದು ಅಂತ ತಿಳಿದು-

ಪುಟ್ಟವ್ವ:— ತಿಳಿದು ಹೊರಗೆ ಹಾಕಿದಿರ್ಯಾ ಹೆಂಡರು ಮಕ್ಕಳನ್ನು? ಹಾಗೆ ಮಾಡದೆ ಇನ್ನೊಂದು ವರ್ಷ ಬಿಟ್ಟು ಮದಿವಿ ಮಾಡಿದ್ದರೆ—

ರಾಯರು:— ಒಂದು ವರ್ಷ ಮೊದಲೇ ಮದವಿ ಮಾಡಿದ್ದರೆ—

[ ಹೀಗೆ ಅವರಿಬ್ಬರೂ ಮಾತನಾಡುತ್ತಿರುವಾಗ್ಗೆ ಪದ್ಮಾವತಿಯು ಒಳಬಾಗಿಲಿನಿಂದ ಬಂದು ಇಬ್ಬರನ್ನೂ ನೋಡದೆ ಹೊರಕ್ಕೆ ಹೋಗುವಷ್ಟರಲ್ಲಿ— ]

ಪುಟ್ಟವ್ವ:— ಪದ್ದಾ ಎಲ್ಲಿಗೆ ಹೊರಟೆ?

ಪದ್ದು:— ಎಲ್ಲಿಗೇನು ? ನನಗೆ ಎಲ್ಲಿಗೆ ಬೇಕು ಅಲ್ಲಿಗೆ.

ರಾಯರು:— ಹಾಗ ಅಲ್ಲ ಪದ್ದು, ನನ್ನ ಮಾತು ಆದರೂ ಕೇಳಿಕೋ–

ಪದ್ದು :— ಕೇಳಿಕೊಳ್ಳೋ ವಯಸ್ಸಿನೊಳಗ ಹೇಳಿದಿರಿ, ತಿಳಿದುಕೊಳ್ಳಲಿಕ್ಕೆ ಬುದ್ಧಿ ಇದ್ದಿದ್ದಿಲ್ಲ ಕೇಳಿದೆ. ಈಗ ಬುದ್ಧಿ ಬಂದಿದೆ, ಕೇಳಿಕೊಳ್ಳೋ ಇಚ್ಛಾ ಇಲ್ಲ. ಯಾರನ್ನು ಕೇಳಿ ಕೊಂಡು ಏನು ಮಾಡೋದು, ತನ್ನ ತಲಿಗೆ ತನ್ನ ಕಿವಿ. ಹೆಂಗಸಿಗೆ ವ್ಯವಹಾರದೊಳಗೆ ಸ್ವಾತಂತ್ರ್ಯ ಇದ್ದರ ನೀವು ನನ್ನ ಬೆಳಸಿದ್ದಕ್ಕಾಗಿ ನಾನು ಋಣಿ ಆಗೀನಿ. ಇಲ್ಲದಿದ್ದರೆ ಒಬ್ಬರೊಬ್ಬರನ್ನು ಮರೆಯೋದೇ ನೆಟ್ಟಗೆ. (ಹೋಗುವಳು)

ಪುಟ್ಟವ್ವ:— ಪದ್ದಾ, ಪದ್ದಾ ! (ಎಂದು ಬಾಗಿಲಬಳಿಗೆ ಹೋಗುವಳು)

ರಾಯರು:— ನಿನ್ನ ದಡ್ಡತನಕ್ಕಾಗಿ ನಾವು ಅನುಭೋಗಿ ಸೋದು. ಅಂದ ನೀನು ಮದಿವಿಮಾಡಿಕೊಟ್ಟಿದ್ದರ–

ಪುಟ್ಟವ್ವ:— ಇಂದಿನತನಕಾ ಕೂಡಾ ನನ್ನ ಜೋಡಿ ಇರತಿದ್ದಿಲ್ಲ ನನ್ನ ಮಗಳು. ಇಂದ ಎಲ್ಲಿ ಹೋದರೂ ನನ್ನ ಒಬ್ಬಾಕಿನ್ನೇ ನೆನಿಸಿಕೊಂಡಾಳಲ್ಲಾ–

ರಾಯರು:— ಎಲ್ಲರನ್ನೂ ಹಾಳುಮಾಡಿದಿ ಅಂತ–

ಪುಟ್ಟವ್ವ:— ಆ ಎಲ್ಲರೊಳಗೆ ನಾನೂ ಇದ್ದರೆ ಸಾಕು. ನನಗೆ ಸುಖ.

—ತೆರೆ

# ನಾಟಕದ ಹಾಡು

ಸೂರ್ಯಾಸ್ತದ ಸಮಯ. ‘ ಅಸ್ತ ’ ಅಸ್ತವೆಂದೊಡನೆ ಬೆಚ್ಚಿ ಬೀಳುವ ಕಾರಣವಿಲ್ಲ. ‘ ಅಸ್ತ ’ವೆಂದ ಕೂಡಲೇ ದುಃಖದ ಇಲ್ಲವೆ ಅಶುಭದ ವಿಚಾರಗಳಷ್ಟೇ ಹೊಳೆಯುವ ದೇನೋ ನಿಜ. ‘ ಅಸ್ತ ’ದಲ್ಲಿ ಸಾಮಾನ್ಯವಾಗಿ ಸಂಸಾರಿಗರಿಗೆ ಸಂಕಟದ ವಿಚಾರಗಳಷ್ಟೇ ತೋಚುವವು. ಆದರೆ ಸೂರ್ಯಾಸ್ತವೆಂದರೆ—ಸೂರ್ಯನು ಮುಳುಗುವ ಸಮಯವೆಂದರೆ ಸಕಲರಿಗೂ ಆನಂದ, ಉತ್ಸಾಹ. ಮುಂಜಾವಿನಿಂದ ಸಂಜೆಯವರೆಗೆ ದುಡಿದ ಕೂಲಿಕಾರನಿಗೆ ಮನೆಗೆ ಹೋಗಿ ತನ್ನವರನ್ನು ಕಾಣುವ ಆನಂದ. ವಿದ್ಯಾರ್ಥಿಗಳಿಗೆ ಶಾಲೆಯ ಶಿಕ್ಷಣವನ್ನು ತೀರಿಸಿ ಆಟನೋಟಗಳಲ್ಲಿ ಭಾಗಿಗಳಾಗಲಿಕ್ಕೆ ಆಸ್ಪದ ದೊರಕುವದೆಂಬ ಆನಂದ. ಕಚೇರಿಯ ಕಾರಕೂನರಿಗೆ ತಮ್ಮ ವರಿಷ್ಠರ ಒರಟು ಶಬ್ದಗಳ ಬದಲಾಗಿ ಮನೆಯಲ್ಲಿಯ ಮಡದಿಮಕ್ಕಳ ಮಮತೆಯ ಮಾತನ್ನು ಕೇಳುವೆವೆಂದು ಆನಂದ. ಮಡದಿಯರಿಗೆ ಮನೆಗೆಲಸಗಳನ್ನು ಮುಗಿಸಿಕೊಂಡು ಗುಡಿಗೆಂದು ಹೊರಹೊರಟಾದರೂ ಸ್ವಚ್ಛವಾದ ಹವೆಯನ್ನು ಉಸಿರಾಡಿಸುವ ಸಮಯ ಬಂದಿತೆಂದು, ದನಗಳಿಗೆ ತಮ್ಮ ತಮ್ಮ ಮನೆಗೆ ಹೋಗಿ ತಮ್ಮ ಕರುಗಳನ್ನು ಕಾಣುವೆವೆಂದು, ಪಕ್ಷಿಗಳಿಗೆ ತಮ್ಮ ಗೂಡುಗಳನ್ನು ಸೇರುವ ಕಾಲ ಬಂದಿತೆಂದು ಆನಂದ. ಈ ಆನಂದ

ದಿಂದಲೇ ಉತ್ಸಾಹ. ಕೆಲವರಿಗೆ ಮನೆಗೆ ಹೋಗುವದರಲ್ಲಿ; ಇತರರಿಗೆ ಮನೆಯಿಂದ ಹೋಗುವದರಲ್ಲಿ ಆನಂದ. ಈ ಪ್ರಕಾರವಾಗಿ ಸಂಜೆಯ ಸಮಯವೆಂದರೆ ಕಷ್ಟನಷ್ಟಗಳನ್ನು ಮರೆಸಿ ಆನಂದವನ್ನು ಬೀರುವ ಸಮಯ. ' ಒಟ್ಟಾರೆ ಸೂರ್ಯಾಸ್ತವೆಂದರೆ ಕಷ್ಟಗಳ ಅಸ್ತವೆಂದೋ ನೀವೆನ್ನುವುದು ?) ' ಎಂದು ಕೇಳಬಹುದು ನೀವು. ಆ-ಹಾ, ನಿಜ, ನಿಮ್ಮ ತರ್ಕ ನಿಜ. ಇಂಥ ಸಂಧ್ಯಾಸಮಯದ ಸೊಬಗನ್ನು ಸವಿಯುವ ಅಧಿಕಾರವು ಸಕಲರಿಗೂ ಉಂಟು. ಹಣವಿಲ್ಲದೇ ಅನುಭವಿಸಬಹುದು ಈ ಆನಂದವನ್ನು. ಅದಕಾಗಿಯೇ ಬಡವರು ಕೂಡ ಈ ಆನಂದವನ್ನು ಅನುಭವಿಸಬಲ್ಲರು. ಸೂರ್ಯಾಸ್ತವೆಂದರೆ ಬಡವರ ಭಾಗ್ಯೋದಯ. ಸಿರಿವಂತರಿಗಾಗಿ ವಿಚಾರ ಮಾಡುವದು ನಮ್ಮ ಕೆಲಸವಲ್ಲ. ಸಿರಿವಂತರಿಗೆ ಸಕಲ ಸೌಂದರ್ಯಗಳನ್ನು ಸವಿಯುವ ಸೌಕರ್ಯಗಳು ಉಂಟೇ ಉಂಟು. ಅಂದಮೇಲೆ ಸೂರ್ಯಾಸ್ತದ ಸೌಂದರ್ಯವು ಅಪವಾದವಾಗಲಾರದು. ನಿಸರ್ಗದ ರಮಣೀಯತೆಯನ್ನು ನಿರೀಕ್ಷಿಸಲು ಎಲ್ಲರಿಗೂ ಉತ್ಸಾಹ—ಆತುರ. ಅದರಂತೆ ನಮ್ಮ ನರಹರಿಗೂ ಉತ್ಸಾಹ—ಆತುರ.

ನರಹರಿಯೆಂಬ ಹೆಸರು ಕೇಳಿದ ಕೂಡಲೇ ಅವನೇ ಈ ಕತೆಯ ನಾಯಕನಿರಬಹುದೆಂದು ಊಹಿಸಿರಬಹುದಲ್ಲವೇ ನೀವು ? ನಿಜ. ಅವನೇ ನಮ್ಮ—ಅದಕ್ಕೇ ನಿಮ್ಮ ನಾಯಕನು ಕೂಡ; ನರಹರಿಯೊಬ್ಬ ತರುಣ. ಅವನು ಉಂಡುಟ್ಟು ತಿರುಗುವ ನಿರುದ್ಯೋಗಿಯಲ್ಲ. ಕಲಿಯಲು ಕಾಲಿಟ್ಟಿದ್ದ ಈ ನಗರದಲ್ಲಿ. ನರಹರಿಯು ರಸಿಕ 'ರಸಿಕ'ನೆಂದರೆ ಎಂತಹ ರಸಿಕ ಎಂದು ಕೇಳಬಹುದು. ಸಂಧ್ಯಾಸಮಯದ ಸವಿ

ಯನ್ನುಣ್ಣುತಿದ್ದನೆಂದು ರಸಿಕ ಎಂದೋ ನಿಮ್ಮ ಅಭಿಪ್ರಾಯ? ಎಂದೂ ಕೇಳಬಹುದು. ಅದನ್ನು ನಾನರಿಯೆ. ಸದ್ಯಕ್ಕೆ ಮಾತ್ರ ಅವನು ನೋಡುತ್ತಿದ್ದುದು ಸಂಧ್ಯಾಸಮಯದ ಸೊಬಗನಲ್ಲ, ಸಂಧ್ಯಾಕಾಲಕ್ಕೆ ತಿರುಗಿ ಮನೆಯ ದಾರಿಯನ್ನು ಹಿಡಿದ ದನಕಾಯುವ ಹುಡುಗರನ್ನು ನೋಡನೋಡುತ್ತ ನೋಡುವದನ್ನೇ ಮರೆತು ಬಿಟ್ಟನಂತೆ. ಅವನ ಕಣ್ಣುಗಳಲ್ಲಿ ಶೂನ್ಯ ದೃಷ್ಟಿ ಕಂಡಿತು. ಅಹುದು — ಮರೆತಿದ್ದೆ. ಅವರ ಕೂಗಾಟ – ಕುಣಿದಾಟ – ಅಣಕಾಟವನ್ನು ನೋಡುತ್ತಿದ್ದ. ಆದನ್ನು ನೋಡಿದಂತೆ ತನ್ನ ಬಾಲ್ಯದ ಸ್ಮರಣೆಯಾಯಿತು ಅವನಿಗೆ. ಈ ಕೂಗಾಟ, ಕುಣಿದಾಟ, ಅಣಕಾಟಗಳಿಂದ ಮೈಮರೆತ ನಮ್ಮ ನರಹರಿ. ತನಗೂ ನೆನಪಾಯಿತು, ತನ್ನ ಬಾಲ್ಯದ ಕೂಗಾಟ-ಕುಣಿದಾಟ–ಅಣಕಾಟ. ತಾನೂ ದನ ಕಾಯುವ ಹುಡುಗನಾಗಬೇಕೆನ್ನಿಸಿತು. ತನ್ನ ತಂದೆಯೊಮ್ಮೆ ಸಿಟ್ಟಿನಿಂದ 'ಹೀಂಗ ನೀ ಮಾಡಿದ್ರ ಮುಂದೆ ದನಕಾಯುವೆ ಏನು?' ಎಂದಿದ್ದರು. ಅದು ಈಗ ಅವನಿಗೆ ನೆನಪಿಗೆ ಬಂದಿತು. ದನಕಾಯುವವನೆಂದರೆ 'ಗೋಪಾಲ' ಅಲ್ಲವೆ? ಈ ವಿಚಾರಕ್ಕೆ ಪುರಾಣದ ಪುಷ್ಟಿಯು ದೊರಕಿತು. ಶ್ರೀಕೃಷ್ಣನು ಗೋವಳನಿದ್ದನು. ಅಂದಮೇಲೆ ತಾನೂ ಗೋವಳನಾದರೆ ಏನು ತಪ್ಪು? ತಾನೂ ಆಡುತ್ತಿದ್ದನು; ಅಣಕಿಸುತ್ತಿದ್ದನು; ಅನುಕರಿಸುತ್ತಿದ್ದನು. ನರಹರಿಗೆ ಈಗ ನೆನಪಾಯಿತು ಅಂತಹದೊಂದು ಪ್ರಸಂಗ. ಒಂದು ದಿನ ಮುಚ್ಚಂಜೆಯ ಸಮಯ. ಮನೆಯಲ್ಲೆಲ್ಲಾ ಕತ್ತಲೆ. ನರಹರಿಯು ಕೂತದ್ದು ನಡುಮನೆಯಲ್ಲಿ. ತಂಗಿ ಅಲ್ಲೇ ಆಡುತ್ತ ಅಣ್ಣನ ಇರವನ್ನೇ ಮರೆತಳು. 'ಮ್ಯಾಂವ್'

ಎಂದು ಕೂಗಿದನು ನರಹರಿ. ಬೆಚ್ಚಿಬಿದ್ದಳು ಆ ಬಾಲೆ. ಹೆದರಿಕೆಯಿಂದ ಚೀರಿದಳವಳು– ' ಅವ್ವಯ್ಯ ಸತ್ತೆ ' ಎಂಬ ಕೂಗು ಈಗೂ ಕೇಳಿದಂತಾಯಿತು !– ತಾನೂ ಗೋವಳ ನಾಗಬೇಕು ಎಂದೆನ್ನಿಸಿತು. ನೋಡಿದನು ದನಕರುಗಳನ್ನು.... ಮತ್ತೊಮ್ಮೆ 'ಅವ್ವಯ್ಯ ಸತ್ತೆ' ಎಂಬ ಕೂಗು ನಿಜವಾಗಿಯೇ ಕೇಳಬರುವದು ! ದನಕರುಗಳೆಲ್ಲ ಬೀದಿಯ ಬದಿಗೆ ಸರಿದು ನಿಂತಿವೆ. ಒಂದು ಬುಟ್ಟಿ – ಸಗಣಿ ತುಂಬಿದ ಬುಟ್ಟಿ – ಬೀದಿಯ ನಡುವಿನಲ್ಲಿದೆ .... ಮುದುಕಿಯೊಬ್ಬಾಕೆ ನರಳುತ್ತ ಬಿದ್ದಿದ್ದಾಳೆ ! ಕೂಗುತ್ತಿದ್ದಾಳೆ ಅವ್ವಯ್ಯ ಸತ್ತೆ' ಎಂದು.... ಆ ಕೂಗನ್ನು ಮುಚ್ಚುವಂತಹ ಇನ್ನೊಂದು ಕೂಗು.... ಮೋಟರಗಾಡಿಯ ಕೂಗು....ಈ ಮುದುಕಿಯನ್ನು ಗಾಯ ಗೊಳಿಸಿ ಯಾವುದರ ಪರಿವೆಯೂ ಇಲ್ಲದೆ, ಎಲ್ಲರ ಕಣ್ಣಲ್ಲಿ ದೂಳ ಚೆಲ್ಲುತ್ತ, ನರಹರಿಯು ನೋಡುನೋಡುತ್ತಿರುವಾಗಲೆ ಮಾಯವಾಯಿತು ಮೋಟಾರಗಾಡಿ.

ಮುಂದೆ ಏನೇನೋ ನಡೆಯಿತು ಅಲ್ಲಿ; ಜನರು ನೆರೆದರು. ಪೋಲೀಸರೂ ಬಂದರು, ಪುರಾವೆಯೂ ಆಯಿತು, ಪಂಚ ನಾಮಾ ಆಯಿತು.—ಆದರೆ ನರಹರಿಗೆ ಅದೊಂದರ ಎಚ್ಚರ ವಿಲ್ಲ....ಆ ಮುದುಕೆಯ ಕರುಣಾಜನಕ ಸ್ಥಿತಿಯ ದೃಶ್ಯ ವೊಂದೇ ಅವನ ಕಣ್ಣು ಕಟ್ಟಿದೆ. ನೋಡಿದಲ್ಲೆಲ್ಲ ಹೆದರಿ ಕಳೆಗೆಟ್ಟ ಮುಖ, ಮುದುಡಿಕೊಂಡು ಬಿದ್ದ ದೇಹ, ಚಿಮ್ಮು ತ್ತಲಿದ್ದ ರಕ್ತ, ಹೊರಚಾಚಿದ ನಾಲಿಗೆ – ಇದೇ ಕಾಣುತ್ತ ಲಿದೆ. ಜಗತ್ತನ್ನು ತುಂಬಿಕೊಂಡಂತಾಯಿತು ಈ ದೃಶ್ಯ· ಎಷ್ಟೋ ಜನರು ಹೀಗೆಯೆ ಸಾಯುತ್ತಿರುವಂತೆ – ನರಳು ತ್ತಿರುವಂತೆ ಕಂಡಿತು ಅವನಿಗೆ ....ಅವರನ್ನು ಉಳಿಸಲು ಓಡ

ಬೇಕೆಂದೆನ್ನಿಸಿತು. ಎಲ್ಲಿ ? ಎಷ್ಟು ಕಡೆ ? .... ಉಳಿಸುವದು ಹೇಗೆ ?....ಪಾಪ ! ಬಡ ಮುದುಕಿ – ಓಹೋ, ತಿಳಿಯಿತು ಅವನಿಗೆ. ಬಡತನದ ಭಾಗ್ಯವಿದು. ಸಿರಿವಂತರ ಮೋಟಾರ ಗಾಡಿಯಲ್ಲಿ ಮುರಿದು ಹೋಗುವದು ಬಡತನದ ಭಾಗ್ಯ.... ಉಳಿಸುವದು ಹೇಗೆ ? ಬಡತನವನ್ನು ಓಡಿಸಿ ?....... ....... ಎಂತಹ ಹುಚ್ಚು ತನ್ನದು ? ಬಡತನಕ್ಕಾಗಿ ಮುದುಕಿ ಸತ್ತ ಳೆಂದು ಆಕೆಯ ಶವದ ವಿಚಾರಣೆ ನಡೆದಾಗ ಪೋಲೀಸ ಕೋರ್ಟಿನಲ್ಲಿ ಹೇಳಿದರೆ, ಜನರೆಲ್ಲ ನಗುವರಲ್ಲವೆ ? ಆದರೂ ಆಕೆ ಸತ್ತುದು – ಏನಿಲ್ಲ ಜನರ ಪ್ರತೀತಿಗೆ ತಂದು ಕೊಡ ಬೇಕು. ತನ್ನ ವಿಚಾರವನ್ನು, ತಾನು ನೋಡಿದ ಘೋರ ದೃಶ್ಯವನ್ನು ಅವರ ಕಣ್ಣೆದುರಿಗೆ ಇಡಬೇಕು, ಹೇಗೆ ? ಆ 'ಘೋರತನದ' ಕಲ್ಪನೆ ಮಿಕ್ಕವರಿಗೂ ಬರುವಂತೆ ಮಾಡುವದು ಹೇಗೆ ? ಹೇಗೆ ?? ಹೇಗೆ ??? ಈ 'ಹೇಗೆ' ಎಂಬುದಕ್ಕೆ ಉತ್ತರವೇ ಹೊರಡದಾಯಿತು. 'ತಾನು ಕಂಡ ದ್ದನ್ನು ಇತರರಿಗೆ ತಿಳುಹಿಸಬೇಕು' ಎಂದು ಯೋಚಿಸಿ ದನು ಒಮ್ಮೆ; ಮರುಕ್ಷಣವೇ ಅದರಿಂದೇನೂ ಪ್ರಯೋಜನ ವಾಗುವಂತೆ ಇಲ್ಲವೆನ್ನಿಸಿತು. ಕತೆಯ ರೂಪದಿಂದ ಕಾಣಿಸಿ ಕೊಡಬೇಕೆಂದು ಯೋಚಿಸಿದ; ಅದು ಕೂಡ ನಿರುಪ ಯೋಗಿ ಎನ್ನಿಸಿತು. ಸಭೆಗಳನ್ನು ಸೇರಿಸಿ ಸಾರಬೇಕು ಎಂದೂ ಯೋಚಿಸಿದ. ಆದರೆ ಅದರ ಪರಿಣಾಮವು ಕಂಠ ಶೋಷವೇ ಹೊರತು ಮತ್ತೇನೂ ಆಗಲಾರದು ಎನ್ನಿಸಿತು. ತನಗೆ ಈ ಸಂಗತಿಯಿಂದ ಕನಿಕರ ಹುಟ್ಟಿತ್ತು. ಉಳಿದವರಿಗೂ ಕನಿಕರ ಹುಟ್ಟಬಹುದು – ಅದೇಕೆ ಹುಟ್ಟಿಸಲೇ ಬೇಕು. ತನ್ನನ್ನು ಆಚ್ಛಾಧಿಸಿದ ಮನೋವ್ಯಥೆಯು ಇತರರನ್ನೂ

ಆಚ್ಛಾದಿಸಬಹುದು ಇವೇ ಮೊದಲಾದ ವಿಚಾರತರಂಗ ಗಳಲ್ಲಿ ಸಿಲುಕಿದಾಗ ಹೊರಗೆ ಹಬ್ಬುತ್ತಲಿದ್ದ ಕತ್ತಲೆಯು ತನ್ನ ಮನಸ್ಸಿನಲ್ಲೂ ಕವಿದಂತಾಯಿತು ನರಹರಿಗೆ.

ಇಂಥ ಸ್ಥಿತಿಯಲ್ಲಿ ಸಂಜೆಯ ಊಟದ ಪರಿವೆಯೇ ಇದ್ದಿಲ್ಲ ಅವನಿಗೆ. ತಂದೆಯು ತಡೆತಡೆದು ಕೇಳಿದನು 'ನರ ಹರಿ ಬಂದಿಲ್ಲೇನು?' ಎಂದು.' ಬಂದಾನ, ಬಂದು ಯಾಕೋ ತನ್ನ ಖೋಲೀ ಒಳಗ ಕೂತಾನ. ಏನಾಗೇದೋ ಏನೋ?' ಎಂದರು ಕಮಲಾಬಾಯರು. ದಿನಾಲು ಸಂಜೆಯ ಸಮ ಯಕ್ಕೆ ಮನೆಗೆ ಬಂದು ಹುಡುಗರ ಸಂಗಡ ಹುಡುಗಾಟ ಮಾಡುತ್ತಿದ್ದನು ಅವನು. ಅಕ್ಕತಂಗಿಯರ ಕೂಡ ಮಾತೆಯ ಕೂಡ ಮಮತೆಯಿಂದ ಮಾತಾಡುತ್ತಿದ್ದನು. ಇಂಥ ನರ ಹರಿಯು ಮನೆಗೆ ಬಂದರೂ ಒಳಗೆ ಕೂಡ ಬರದಿದ್ದುದನ್ನು ನೋಡಿ ಕಮಲಾಬಾಯರು ಚಡಪಡಿಸಹತ್ತಿದರು. 'ಶಾಂತಾ (ನರಹರಿಯ ತಂಗಿ) ಅಣ್ಣಾನ್ನ ಎಬ್ಬಸವಾ ಊಟಕ್ಕ' ಎಂದು ಕಮಲಾಬಾಯರು ಹೇಳಿದರು. ಸುಖದುಃಖಗಳ ವಿಚಾರ ವಿಲ್ಲದ ಶಾಂತೆಯು ಎಂದಿನಂತೆ ಅಣ್ಣನನ್ನು ತಬ್ಬಿಕೊಂಡು ತೊದಲ್ನುಡಿಗಳಿಂದ ಕರೆಯತೊಡಗಿದಳು 'ಮಮ್ಮಿಗೆ ಬಾ ಮಮ್ಮಿಗೆ ಬಾ' ಎಂದು. ತಂಗಿಯ ತೊದಲ್ನುಡಿಯ ಕಡೆಗೆ ಲಕ್ಷ್ಯವೇ ಇದ್ದಿಲ್ಲ ನರಹರಿಗೆ. ಕರೆಕರೆದು ಬೇಸತ್ತು ಅಳುತ್ತ ತಿರುಗಿದಳು ಶಾಂತೆ. ಅಕ್ಕನು ಬಂದು ಅಕ್ಕರೆಯಿಂದ ಎಬ್ಬಿಸಿ ದಳು ಊಟಕ್ಕೆ, ತಮ್ಮನನ್ನು. ಪರಿಪರಿಯಿಂದ ಕೇಳಿದಳು ಅವನ ಮನದ ದುಗುಡವನ್ನು. ಅಕ್ಕನೂ ತಿಳಿಯದೆ ಹೋದಳು. ತಮ್ಮನ ಮನದ ಸ್ಥಿತಿಯನ್ನು. ಅಕ್ಕನು ಮರಳಿ ದಳು ಅವ್ವನನ್ನು ಕಳುಹಿಸಲು. ತಾಯಿಯು ಬಂದು 'ಏನಾ

ಗೇದ್ದೋ ತಮ್ಮಾ, ಹೀಂಗ ಯಾಕ ಕೂತೀದಿ ತಲೆ ಹಿಡಿದು ಕೊಂಡು? ಏಳಬಾರದ ಊಟಕ್ಕ ? ' ಎಂದರು. ದಟ್ಟಡವಿ ಯಲ್ಲಿ ಎಲ್ಲಿಂದಲೋ ತನ್ನವರ ಧ್ವನಿ ಕೇಳಿದರೆ ಆಗುವಷ್ಟು ಆನಂದವು ನರಹರಿಗೆ ಆಯಿತು. ಅವನಿಗೆ ಕಗ್ಗತ್ತಲೆಯಲ್ಲಿ ಎಲ್ಲಿಂದಲೋ ಬೆಳಕು ಕಂಡಂತಾಯಿತು. 'ಅವ್ವಾ' ಎಂದನು. ಒಮ್ಮೆಲೆ ' ಹೇಳೋ ತಮ್ಮಾ, ಹೇಳು. ಏನಾಗೇದ ಹೇಳು ' ಎಂದು ಕಳವಳದಿಂದ – ಕನಿಕರದಿಂದ ಕೇಳಿದರು ಕಮಲಾ ಬಾಯರು; ಒತ್ತಾಯದಿಂದ, ಒಲುಮೆಯಿಂದ ಕೇಳಿದರು. ಕುಗ್ಗುವ ದನಿಯಲ್ಲಿ ಕಳೆಯಿಲ್ಲದ ಮುಖದಲ್ಲಿ ಕನಿಕರವು ಕಾಣಿಸಹತ್ತಿತು ನರಹರಿಯ ತಾಯಿಗೆ. ಸಂಭವಿಸಿದ ಸಂಗತಿ ಯನ್ನು ಹೇಳಲಾರಂಭಿಸಿದ ನರಹರಿ ಆದರೆ ಮಾತು ಹೊರ ಡದು, ಶಬ್ದ ಸಾಲದು. ಹೃದಯದ ಕಳವಳದಿಂದ ಆ ಮುದುಕಿಯ ಆರ್ತ ದನಿಯೇ ಹೊರಟಿತು ಅವನ ಬಾಯಿ ಯಿಂದ. ಮುದುಕಿಗಾಗಿರಬಹುದಾದ ವೇದನೆಯೇ ಅವನಿಗೂ ಆದಂತೆನ್ನಿಸಿ ನರಹರಿಯು ತಲೆಯನ್ನಪ್ಪಳಿಸಿದನು ಮುಂದಿದ್ದ ಮೇಜಿನ ಮೇಲೆ. ಕಮಲಾಬಾಯರು ಕಣ್ಣೀರು ಸುರಿಸಿದರು.

ಮರುದಿವಸ ವಿಚಾರ ಮಾಡುವಾಗ ಹೊಳೆಯಿತು ನರ ಹರಿಗೆ – ತನ್ನ ತಾಯಿಯ ಮನಸ್ಸಿನ ಮೇಲೆ ಪರಿಣಾಮ ವಾದಂತೆ ಜನರ ಮನಸ್ಸಿನ ಮೇಲೂ ಆಗುವದು ಶಕ್ಯವಿದೆ. ಅವಳಿಗೆ ಹೇಳಿದಂತೆಯೇ ಅವರಿಗೂ ಹೇಳಬಹುದು. ಮಾತಿ ನಿಂದಲ್ಲ, ಅಭಿನಯದಿಂದ; ಅನುಕಂಪದ ರಸದಿಂದಲ್ಲ, ಅನುಕರಣದ ನಟನೆಯಿಂದ; ವಿಚಾರಗಳ ವರ್ಣನೆಯಿಂದಲ್ಲ, ವಿಕಾರಗಳ ವರ್ಣದಿಂದ........ನಿಶ್ಚಯಿಸಿದ – ನಾಟಕವನ್ನು ಬರೆದು, ಅಲ್ಲ ಹಾಳು, ಬರೆಯುವದೇನು ದೊಡ್ಡ ಕೆಲಸ ?

ನಾಟಕವನ್ನು - ಮುದುಕಿಯ ದೃಶ್ಯವನ್ನು ಅಭಿನಯಿಸುವದನ್ನು ನಿಶ್ಚಯಿಸಿದನು. ಅರ್ಕಿಮಿಡಿಸ್ಸನಿಗೆ ತನ್ನ ತತ್ವವನ್ನು ಹುಡುಕಿ ತೆಗೆದಾಗ ಆದಷ್ಟು ಆನಂದವಾಯಿತು ನಮ್ಮ ನರಹರಿಗೆ. ಆರ್ಕಿಮಿಡಸ್ಸನು ಶೋಧದ ಭರದಲ್ಲಿ ಬತ್ತಲೆ ಓಡಿದನಂತೆ ಹೊರಗೆ ಸಮಾಜದಲ್ಲಿ. ಆದರೆ ನರಹರಿಗೆ ಹೊರಗಿನ ಸಮಾಜವನ್ನೇ ಬತ್ತಲೆ ಓಡಿಸಬೇಕೆಂದೆನ್ನಿಸಿತು ರಂಗಭೂಮಿಯ ಮೇಲೆ.

ನಾಟಕವನ್ನು ಮಾಡಬೇಕಾದರೆ ನಾಟಕವೊಂದನ್ನು ಬರೆಯಬೇಕಾಗುವದು. ಬರೆಯಬೇಕೆಂಬ ವಿಚಾರ ಬಂದ ಕೂಡಲೆ ಬರೆಯಲು ಉದ್ಯುಕ್ತನಾದ ನಾಟಕವೊಂದನ್ನು-ಊಂ- ಹೂಂ ಅಲ್ಲ ದೃಶ್ಯವೊಂದನ್ನು (ಇಷ್ಟು ಸಣ್ಣ ಸಂಗತಿಯು ನಾಟಕವಾಗಲಾರದು) ಬರೆದ. ದೃಶ್ಯ ಬರೆದರೆ ಅದನ್ನು ಆಡಿದಂತಾಗಲಿಲ್ಲ. ಆಡದ ವಿನಾ ಮಿಕ್ಕವರ ಕಣ್ಣಿಗೆ ಕಾಣುವಂತಿಲ್ಲ. ಮಿಕ್ಕವರ ಕಣ್ಣಿಗೆ ಕಾಣದ ವಿನಾ ಇಚ್ಛಿತ ಕಾರ್ಯಸಿದ್ಧಿಯಾಗುವಂತಿಲ್ಲ. ದೃಶ್ಯವನ್ನು ಆಡುವದು ಒಬ್ಬನ ಕೆಲಸವಲ್ಲ. ಅದಕ್ಕೆ ಒಬ್ಬಿಬ್ಬರ ಸಹಾಯವು ಸಿಗುವಂತಿಲ್ಲ ನಾಟಕವನ್ನು ಆಡುವದೆಂದರೆ ನಾಚಿಗೆಗೇಡಿತನವೆಂದು ನಮ್ಮವರ - ಅದರಲ್ಲೂ ನಮ್ಮ ಹಿರಿಯರ ತಿಳುವಳಿಕೆ. ನಾಚಿಗೆಗೇಡಿತನವಾದರೂ ಪರಿವೆಯಿಲ್ಲ, ನಾಟಕವನ್ನು ಆಡಿಯೇ ಬಿಡಬೇಕೆಂದು ನಿಶ್ಚಯಮಾಡಿದ- ಹಟ ಹಿಡಿದ. ತನ್ನ ಗೆಳೆಯರಿಗೆ ಪಾತ್ರವನ್ನು ವಹಿಸಲು ಪ್ರಾರ್ಥಿಸಿದ - ಬಿನ್ನವಿಸಿಕೊಂಡ. ಬಿನ್ನಹಕೆಗೆ ಮಿತ್ರರ ಮನ್ನಣೆಯಾಯಿತು. ದಿನವೊಂದನ್ನು ಗೊತ್ತುಮಾಡಿ ದೃಶ್ಯವನ್ನು ಆಡುವೆವೆಂದು ಆಡಂಬರದಿಂದ ಸಾರಿದ್ದಾಯಿತು. ದೃಶ್ಯದ

ತಾಲೀಮು ಸುರುವಾಯಿತು. ನಟನೆಯನ್ನು ಕೆಡಿಸಬಾರದೆಂದು ತಮ್ಮ ತಮ್ಮೊಳಗೆ ಮಾತನಾಡಿಕೊಂಡರು-ನಿರ್ಧರಿಸಿದರು ನಟನೆಯನ್ನು ಕೆಡಿಸಿದರೆ ದೇವಾಧಿದೇವನಾದ ಇಂದ್ರನ ಶಾಪವು ತಟ್ಟುವದೆಂಬ ಭಯ ತಟ್ಟಿತು ಅವರನ್ನು. ಇಂದ್ರನ ಸ್ವರ್ಗೀಯ ರಂಗಭೂಮಿಯಲ್ಲಿ (Celestial theatre) ಪಾತ್ರವನ್ನು ವಹಿಸಿ ನಟನೆಯನ್ನು ತಪ್ಪಿ ದೇವಾಧಿದೇವನ ಶಾಪದಿಂದ ಪೃಥ್ವಿಯಲ್ಲಿ ಪುನರ್ಜನ್ಮ ತಾಳಿದ ಊರ್ವಶಿಯ ಸ್ಥಿತಿಯು ನೆನಪಾಗಿಯಂತೂ ಅವರ ನಿಶ್ಚಯವು ದೃಢವಾಯಿತು – ಹಟವು ಅಚಲವಾಯಿತು.

ಸಾರಿದ ಸಮಯವು ಸಮೀಪಿಸಿತು–ಸನಿಹಕ್ಕೆ ಬಂದಿತು–ಇಂದೇ ಆ ದಿನ. ನರಹರಿಯ ಗುಂಪಿನವರು ನಾಟಕವನ್ನಾಡುವ ದಿನ. ಇಂದಿನ ಈ ನಾಟಕದಲ್ಲಿಯ ಮುಖ್ಯ ಪಾತ್ರವೆಂದರೆ ಮುದುಕಿಯದೇ ಅಲ್ಲವೇ ? – ಆಂ. ಅಲ್ಲ ಸಹಜ ಕೇಳಿದೆ. ಕೇಳಿದ ಕೂಡಲೇ ಹೊಳೆಯುದಿದ್ದರೆ ವಿಚಾರ ಮಾಡಿ ಹೇಳಿರಿ. ಇದರಲ್ಲಿ ಹೇಳುವದೇನು ಎನ್ನುವಿರೋ ? ಅದೂ ನಿಜ. ಅದನ್ನು – ಆ ಪಾತ್ರವನ್ನು ವಹಿಸಿದವನು ನಮ್ಮ ನರಹರಿ. ಇದನ್ನು ನೋಡಲಿಕ್ಕೆ ಎಷ್ಟೋ ಜನರು ಬಂದಿದ್ದರು. ಹುಡುಗರು ಹಿರಿಯರು, ಹೆಂಗಸರು ಗಂಡಸರು, ತಿಳಿದವರು ತಿಳಿಯದವರು, ಕಲಿತವರು ಕಲಿಯದವರು, ಎಲ್ಲರೂ ಬಂದು ಸೇರಿದ್ದರು ನಾಟಕ ಗೃಹದಲ್ಲಿ. ಹುಡುಗರ ಮಂಗಾಟವನ್ನು ನೋಡಲೆಂದು ಹಿರಿಯರು, ಸರಿಕರ ನಟನಾ ಚಾತುರ್ಯವನ್ನು ನೋಡಲೆಂದು ತರುಣರು, ನೋಡುವ ಹೌಸನ್ನು ತೀರಿಸಿಕೊಳ್ಳಬೇಕೆಂದು ಹೆಂಗಸರು, ಹೊತ್ತುಗಳೆಯಲು ಉಂಡಾಡಿಗರು – ಇವರೆಲ್ಲರೂ ಕಾಣುತ್ತಿದ್ದರು

ನಾಟಕ ಗೃಹದಲ್ಲಿ. ಜನರಿಂದ ಕಿಕ್ಕಿರಿದು ತುಂಬಿದ ನಾಟಕ ಗೃಹವನ್ನು ನೋಡಿ ಮೊದಲೇ ಸ್ಫೂರ್ತಿಗೊಂಡ ನರಹರಿಯು ಮತ್ತಿಷ್ಟು ಸ್ಫೂರ್ತಿಗೊಂಡನು. ಎಲ್ಲರೂ ತಮ್ಮ ಪಾತ್ರವನ್ನು ಚೆನ್ನಾಗಿ ಅಭಿನಯಿಸಿದರು (ಇಂದ್ರನ ಶಾಪವನ್ನು ತಪ್ಪಿಸ ಲೆಂದೊ?) ಮುದುಕಿಯ ಪಾತ್ರವನ್ನು ಅಭಿನಯಿಸಿದ ನರ ಹರಿಗಂತೂ ತನ್ನದರ ಅರಿವೇ ಇರಲಿಲ್ಲ. ನಟನೆಯೆಂದರೆ ತನ್ನ ಇರವನ್ನೇ ಮರೆಯುವದೆಂದು ಓದುಗರಿಗೆ ಬೇರೆ ಹೇಳಬೇಕಾಗಿಲ್ಲ ಅಂದ ಮೇಲೆ ನರಹರಿಯ ನಟನೆಯು ಬೊಟ್ಟು ಕಚ್ಚುವಂತಹದಿತ್ತು ಎಂಬದನ್ನು ಬೇರೆ ಹೇಳಬೇಕಾ ಗಿಲ್ಲ. ಅದರಲ್ಲೂ ' ಅವ್ವಯ್ಯ ಸತ್ತೆ ' ಎಂದು ಧ್ವನಿಯನ್ನು ತೆಗೆದಾಗಂತೂ ಅವನು ನರಹರಿಯೇ ಎಂದು ಯಾರೂ ನಂಬುವಂತಿರಲಿಲ್ಲ

ನಾಟಕವು ಮುಗಿಯಿತು. ಜನರೆಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಮರುದಿವಸ ವೃತ್ತಪತ್ರಿಕೆಗಳೆಲ್ಲವೂ ನರಹರಿಯನ್ನು ಹೊಗಳಲಾರಂಭಿಸಿದವು – ಹೊಗಳಿದವು. ಸ್ತುತಿಯು ಅನೇಕರಲ್ಲಿ ಅನೇಕ ವಿಚಾರಗಳನ್ನು ಉದ್ಭವಿ ಸಿತು. ಹಿರಿಯರಿಗಂತೂ ರುಚಿಸಲೇ ಇಲ್ಲ ಈ ಸ್ತುತಿಯು. 'ಬಣ್ಣಾ ಬಡಿದುಕೊಂಡು ಕುಣಿದದ್ದನ್ನು ಎಲ್ಲ ಹೀಗೆ ವರ್ಣಿಸಲಿಕ್ಕೆ ವರ್ತಮಾನ ಪತ್ರದವರಿಗೆ–ಅಂದರೆ ಸಂಪಾದಕ ರಿಗೆ ಬೇರೇ ಉದ್ಯೋಗನ ಇರೋದಿಲ್ಲೋ ಏನೋ ' ಎಂದರು ಕೆಲರು. ' ನಾಟಕಾ ಅಂದರ ನಗಿಗೇಡ ಕೆಲಸಾ ' ಎಂದು ನುಡಿದರು ಕೆಲರು. ' ನಾಟಕ ಮಾಡೋದು ಅಂದರ ಮನೆತನದ ಮಾನಾ ಮರ್ಯಾದಿ ಮಾರಿಕೊಂಬೋದು' ಅಂತ ಅಂದರು ಕೆಲರು. ಪಾಪ! ಪಾತ್ರ ವಹಿಸಿದವರ ಮನೆಯವರು ಏನು ಮಾಡಿಯಾರು ? ' ಕಾಲಾನ ಕೆಡಲಿಕ್ಕೆ

ಹತ್ತೀದ' ಅಂತ ಉಸಿರೆಳೆದರು. ಪಾಪ!| ಅವರಿಗೇನು ಗೊತ್ತು ನಾಟಕದ ಮಹಿಮೆ. ನಾಟಕವೆಂದರೆ ನಟರಿಗೆ ನೌಕರಿ (ಇಂಥ ನೌಕರಿ ಇಲ್ಲದ ಕಾಲದಲ್ಲಿ ಕೂಡಾ), ನಾಟಕ ವೆಂದರೆ ಸಮಾಜದ ಮುಂದಾಳುಗಳ ಪರಿಚಯ (ಕೆಲವೆಡೆ ಯಲ್ಲಿ ಮಿತ್ರತ್ವ ಕೂಡಾ), ನಾಟಕವೆಂದರೆ ಜಗದ ಸನ್ಮಾನ, ನಾಟಕವೆಂದರೆ ಗುರುಗಳ ಕೃಪಾದೃಷ್ಟಿ (ವಿದ್ಯಾರ್ಥಿಗಳಿಗೆ), ನಾಟಕವೆಂದರೆ ದುಡ್ಡು (ಕಂಪನಿಯ ಮಾಲಕನಿಗೆ). ಇಷ್ಟಿದ್ದ ಮೇಲೆ ನಾಟಕವನ್ನು ಏಕೆ ಮಾಡಬಾರದು ? ಮಾಡುವದರಲ್ಲಿ ತಪ್ಪು ಏನೂ ಇಲ್ಲ. ಯಾಕಂದರೆ ಪುರಾಣದೊಳಗಿನ ಪುಣ್ಯಪುರುಷರೂ ಸ್ವರ್ಗದೊಳಗಿನ ದೇವತೆಗಳೂ ನಾಟಕ ವನ್ನಭಿನಯಿಸುತ್ತಿದ್ದರು. ಹೀಗೆಂದರೆ ಪುರಾಣದ ಟೀಕೆಯೇ ನಮ್ಮ ಧ್ಯೇಯವೆಂದು ಓದುಗರು ಕಲ್ಪಿಸಬಹುದು. ಸ್ವಲ್ಪ ವಿಚಾರಿಸಿದರೆ ನಿಮಗೂ ಹೊಳೆಯುವುದು ನಮ್ಮ ಮಾತಿನ ಮರ್ಮ. ಪಾಂಡವರು ಕೂಡ ಪಾತ್ರ ವಹಿಸುತ್ತಿದ್ದರು.. ಪಾಂಡವರು ವಿರಾಟ ರಾಜನ ಮನೆಯಲ್ಲಿ – ತಮ್ಮ ಅಜ್ಞಾತವಾಸದಲ್ಲಿ ಮಾಡಿದ್ದೇನು ? ತಾವು ಪಾಂಡವರು ಅಲ್ಲ ಎನ್ನುವ ನಟನೆಯೇ ಅಲ್ಲವೇ ? ಸುಭದ್ರೆಯನ್ನು ದೊರಕಿಸ ಬೇಕಾದರೆ ಅರ್ಜುನನಿಗೆ ಸನ್ಯಾಸಿಯ ಪಾತ್ರವನ್ನು ಅಭಿನ ಯಿಸಬೇಕಾಯಿತು. ಶಿವನಿಗೂ ಕೂಡ ತಪ್ಪಲಿಲ್ಲ ನಟನೆ.... ಪಾರ್ವತಿಯನ್ನು ಪಡೆಯಬೇಕಾದರೆ ಶಿವನಿಗೆ ವಟುವಿನ ಪಾತ್ರವನ್ನು ವಹಿಸಬೇಕಾಯಿತು. ಯಾಕೆ ? ನಿಮ್ಮ ಅಭಿ ಪ್ರಾಯವೇನು ? ಬಣ್ಣ ಬಡೆದುಕೊಂಡು ರಂಗಭೂಮಿಯ ಮೇಲೆ ವೇಷ ಬದಲಾಯಿಸಿದರಷ್ಟೇ ನಟನೆಯೇ ? ಪಾಂಡವ ರಂತೆ–ಶಿವನಂತೆ ವೇಷ ಬದಲಾಯಿಸಿದರೆ ನಟನೆಯಲ್ಲವೆ ?

ವೃತ್ತಪತ್ರಿಕೆಗಳ ಹೊಗಳುವಿಕೆಯಿಂದ – ತನ್ನ ನಟನಾ ಚಾತುರ್ಯದ ಹೊಗಳಿಕೆಯಿಂದ, ನರಹರಿಗೆ ಎಳ್ಳಷ್ಟೂ ಸಮಾಧಾನವಾಗಲಿಲ್ಲ- ತಾನು ಬಯಸಿದ್ದೊಂದು, ಆದದ್ದು ಮತ್ತೊಂದು. ಮುದುಕಿಯ ಮರಣವನ್ನು ಜನರ ಪ್ರತೀತಿಗೆ ತಂದುಕೊಡಬೇಕೆಂಬುದು ಅವನ ವಿಚಾರ – ಆದರೆ ಆದದ್ದು ತನ್ನ ಪ್ರಖ್ಯಾತಿ. ತಾನು ನೋಡಿದ ಘೋರ ದೃಶ್ಯವನ್ನು ಜನರ ಕಣ್ಣೆದುರಿಗೆ ಇಡಬೇಕೆಂದು ಅವನ ವಿಚಾರ–ಆದರೆ.... ಆದರೆ – ಮುಂದೆ ಹೇಳದಾದ ನರಹರಿ. ಈ ದೃಶ್ಯದಲ್ಲಿ– ಮುದುಕಿ ಸತ್ತ ದೃಶ್ಯದಲ್ಲಿ–ಒಂದು ಸಾಮಾಜಿಕ ತೊಡಕು– ತತ್ವ ಅಡಕವಾಗಿದೆ ಎಂಬುದು ಯಾವ ವೃತ್ತಪತ್ರಿಕೆಯ ವರಿಗೂ ಹೊಳೆದಿದ್ದಿಲ್ಲ–ಅವರು ಬರೆದದ್ದನ್ನು ನೋಡಿದರೆ ಹೊಳೆಯುವದಂತೂ ಇರಲಿಲ್ಲ. ವಿಮರ್ಶಕ ಮಹಾಶಯ ರೊಬ್ಬರು - ಸಂಸ್ಕೃತ ಮಹಾಕವಿಯನ್ನು – ಕಾಳಿದಾಸ ನನ್ನು – ಕಾಳಿದಾಸನ ವಾಕ್ಯಗಳನ್ನು ವಿವರಿಸಿ ' ಸಗಣಿಯ ಸಾಧ್ವಿ' ಸರಿಯಲ್ಲ ರಂಗಭೂಮಿಗೆ ಎಂದು ಬರೆದಿದ್ದಾರೆ. ಈ ಬರಹವನ್ನು ನೋಡಿ ನರಹರಿಗೆ ಒಂದು ಉತ್ತರವನ್ನು ಬರೆಯಬೇಕೆನ್ನಿಸಿತು–ಬರೆದನು. ಕಾಲಿದಾಸನ ಕಾಲದ ವೃತ್ತಪತ್ರಗಳು ಅಚ್ಚಾಗಲು ಅನರ್ಹವಾದ ಜಾಹೀರಾತು ಗಳನ್ನು-ಗಂಡಹೆಂಡಿರ ಜಗಳದ ಸುದ್ದಿ ಸಂಗತಿಗಳನ್ನು ವೃತ್ತವೆಂದು ಸಾರುತ್ತಿದ್ದಿಲ್ಲ' ಎಂದು.

ನಾಲ್ಕೆಂಟು ದಿವಸಗಳಾದವು. ವರ್ತಮಾನಪತ್ರದ ಆಫೀ ಸಿನ ಮುಂದೆ ಹಾಯ್ದು ಹೋಗುತ್ತಿದ್ದೆವು. ಹೋಗುವಾಗ ನೋಡಿದೆವು–ಸಿಕ್ಕಿತು ಒಂದು ಮುದುಡಿದ ಕಾಗದ. ಉತ್ಸುಕತೆಯಿಂದ – ಆತುರತೆಯಿಂದ ತೆರೆದೆವು-ಆದರೆ ಅದು ನರಹರಿಯ ಬರಹ.........

# ಕಾಂತ

ಅದೀಗ ಡಿಸೆಂಬರ ತಿಂಗಳು. ಊರಲ್ಲೆಲ್ಲ ಬೇನೆಯು ಹಬ್ಬಿದೆ. ಯಾವ ಬೇನೆ ಎನ್ನುವಿರೋ? ಹಬ್ಬಿದೆ ಗಂಟಿನ ಬೇನೆ. ಊರವರೆಲ್ಲರೂ ಬಿಡಹತ್ತಿದ್ದಾರೆ ಊರನ್ನು. ಊರು ಬಿಟ್ಟವರಲ್ಲಿ ಕೆಲವರು ಪರವೂರಿಗೆ ಹೋಗಿದ್ದಾರೆ; ಕೆಲವರು ಇದ್ದೂರಲ್ಲಿಯೆ ಸ್ಥಳ ಬದಲಾಯಿಸುತ್ತಲಿದ್ದಾರೆ; ಕೆಲವರು ಈಗಾಗಲೆ ಬದಲಾಯಿಸಿದ್ದಾರೆ. ಸ್ಥಳ ಬದಲಾಯಿಸಿ ಹೋಗಿರುವವರಾದರೂ ಎಲ್ಲಿಗೆ? ಎಲ್ಲಿಗೆ ಎಂದರೆ ಸ್ವಚ್ಛವಾದ ಹವೆಯು ಆಡುವ ಸ್ಥಳಗಳಿಗೆ!

ಬೇನೆಗೆ ಬೇಸತ್ತು ಸ್ಥಳ ಬದಲಾಯಿಸಿದವರಲ್ಲಿ ಕಾಂತನೂ ಒಬ್ಬ. ಇವನು ಅದೇ ಊರಲ್ಲಿಯೆ ತನ್ನ ಸ್ವಂತದ್ದಾದ 'ಶಾಂತಿಸದನ'ದಲ್ಲಿ ಇರಲು ಹೋದನು. 'ಶಾಂತಿಸದನ' ಎಂದರೆ ಏನು ಎಂಬುದನ್ನು ವಾಚಕರು ಊಹಿಸಿರಬಹುದಲ್ಲವೆ? ಅದು ಅವನು ಇರಲು ಹೋದ ಮನೆಯ–ಅದೇಕೆ ಬಂಗ್ಲೆಯ ಹೆಸರು. ಸ್ವತಃದ ಬಂಗ್ಲೆ ಇದ್ದ ಅನೇಕ ಜನರಿರುವಾಗ ಕಾಂತನ ಹೆಸರನ್ನೆ ಎತ್ತಿ ನಾವು ಹೇಳುವದಕ್ಕೆ ಕಾರಣವೇನೆಂದರೆ ಕಾಂತನು ಕಾಲೇಜಕುವರ. ಅವನು ಓದುತ್ತಿದ್ದುದು ಬಿ. ಎ. ಕ್ಲಾಸಿನಲ್ಲಿ. ವಯಸ್ಸಿನಿಂದ ಚಿಕ್ಕವ, ದೇಹದಿಂದ ಧಷ್ಟಪುಷ್ಟ. ನಿಡಿದಾದ ದೇಹ, ದುಂಡನ್ನ ಮುಖ, ಎದ್ದುಕಾಣುವ ಲಲಾಟ. ಆ ಊರಲ್ಲಿ ಕಾಂತನ ಹೆಸರನ್ನು ಕೇಳದವರು ತೀರ ವಿರಲ. ವಿದ್ಯೆಯಲ್ಲಿ ಮೊದಲು

ಆಟದಲ್ಲಿ ಮೊದಲು, ನೋಟದಲ್ಲಿ ಮೊದಲು, ಕಾಲೇಜ ಪ್ರೊಫೆಸರರ ಪ್ರೀತಿಸಂಪಾದನೆಯಲ್ಲಿ ಮೊದಲು; ವಿದ್ಯಾರ್ಥಿ ನಿಯರ ಕೂಡ ವಿನಯದಿಂದ ವರ್ತಿಸುವದರಲ್ಲಿ ಕೂಡ ಮೊದಲೆ! ಕಾಂತನು ಇಂದು ನಾತಾಳಿಯ ಸೂಟಿಯ ನಿಮಿತ್ತ ವಾಗಿ ಅಣ್ಣನ ಊರಿಗೆ ಹೋಗುವವನಿದ್ದನು. ಮಧ್ಯಾನ್ಹದ ಎರಡುಗಂಟೆಯ ಸಮಯ. ಎಲ್ಲೆಡೆಯಲ್ಲಿಯೂ ಶಾಂತ ತೆಯು ಹಬ್ಬಿದೆ. ಆದರೆ 'ಶಾಂತಿಸದನ'ದಲ್ಲಿಯೆ ಶಾಂತ ತೆಯು ಇರಲಿಲ್ಲ. 'ಅದೇಕೆ?' ಅದೇಕೆ ಎಂದರೆ, 'ಶಾಂತಿ ಸದನ'ದ ಶಾಂತಿ ಎಂದರೆ ಸದನದಲ್ಲಿದ್ದವರ ಶಾಂತಿಯೆ ಅಲ್ಲವೆ? ಅಲ್ಲ, ಸಹಜ ಕೇಳಿದೆ. 'ಅಂದರೆ ಕಾಂತನಿಗೆ ಶಾಂತಿ ಇದ್ದಿಲ್ಲವೆಂದೋ ನಿಮ್ಮ ಅಭಿಪ್ರಾಯ?' ಆಹಾ ಅದು ಕೇವಲ ನಮ್ಮ ಅಭಿಪ್ರಾಯವಲ್ಲ, ಕಾಂತನ ಅಭಿಪ್ರಾಯ; ಅವನ ಮನಸ್ಥಿತಿಯೆ ಹಾಗಿದ್ದಿತು. ಒಂದು ಪ್ರೀತಿಯ ವಸ್ತುವನ್ನು ಇನ್ನು ಬಹುದಿವಸಗಳ ವರೆಗೆ ಕಾಣುವಂತಿಲ್ಲ ಎಂದು ಇಂದು ಕಾಣುವ ಮುಂಚೆ ನಮ್ಮ ಸ್ಥಿತಿಯು ಏನಾಗು ತ್ತದೆ? ಮಿತ್ರರನ್ನು-ಅದರಲ್ಲೂ ಜೀವದ ಗೆಳೆಯರನ್ನು ಅಗಲುವೆವೆಂದು, ಅಗಲುವ ಪೂರ್ವದಲ್ಲಿ ಏನಾಗುತ್ತದೆ ನಮ್ಮ ಸ್ಥಿತಿ? ಮುಂದಿನ ಅಗಲಿಕೆಗಾಗಿ ಇಂದು ಖೇದ, ಅಗಲಿಕೆಯ ಪೂರ್ವದ ಭೆಟ್ಟಿಗಾಗಿ ಆನಂದ. ಇಂತಹ ಮನಸ್ಥಿತಿಯಲ್ಲಿ ದ್ದನು ನಮ್ಮ ಕಾಂತನು.

ಇದೇನೋ ಸಹಜವಾದುದೆ. ಎಲ್ಲರಿಗೂ ಅಂತಹ ಅನುಭವ-ಅವಕಾಶ ಬರುತ್ತಿರುವಾಗ ಕಾಂತನದೇನು ಹೇಳು ವದು-ಎನಬೇಡಿರಿ. ಮೊದಲು ಕಾಂತನು ಅಗಲುವ ವಿಷಯ ಎಲ್ಲರ ಅನುಭವದ ವಿಷಯವೊ ಹೇಗೆ ನೋಡಿರಿ, ಆ ಮೇಲೆ

ಮಾತನಾಡಿರಿ. ಅವನು ತನ್ನ ಮಿತ್ರಳಾದ ಕಲೆಯನ್ನು ಅಗಲುವದು; ಅದಕ್ಕಿಂತ ಮುಂಚಿತ ಆ ಕಲೆಯನ್ನು ಕಾಣುವದು.

ಆಂ! ಇದೇನು? ಕಲೆಯನ್ನು ಅಗಲುವದೆಂದ ಕೂಡಲೆ ನಿಮ್ಮ ಮುಖಗಳು ಕಾಂತಿಹೀನವಾದ ಕಾರಣವೇನು ? ಕಲೆಯನ್ನು ಕಾಣುವೆನೊ, ಇಲ್ಲವೊ ಎಂದು ಕಾಂತಿಹೀನವಾಗಿತ್ತು ಕಾಂತನ ಮುಖ; ಆದರೆ—ಆದರೆ ಕೋಪಿಸಬೇಡಿ, ನಿಮ್ಮ ಮುಖ ಕಾಂತಿಹೀನವಾಗಲು ಕಾರಣವೇನು? ಕಾರಣ; ಸಿಟ್ಟು, ಅಸಹನೆ, ನಾಚಿಕೆಗೇಡಿತನ, ಓಹೋ! ಸಿಟ್ಟೇನೋ ಬರಬಹುದು. ಸ್ತ್ರೀಯರ ಕೂಡ ಮನಬಿಚ್ಚಿ ಮಾತನಾಡುವದೆಂದರೆ ಸಿಟ್ಟು ಬರದೆ ಬಿಟ್ಟೀತೆ! ಅಹುದು. ನಿಜ, ಬಾರದೇನು ಮಾಡೀತು! ಸ್ತ್ರೀಯೆಂದ ಕೂಡಲೆ ಒಂದು ಭೋಗ್ಯವಸ್ತು ಎಂಬ ಕಲ್ಪನೆಯವರಿಗೆ, ಸ್ತ್ರೀಯರ ಕೂಡ ಮಿತ್ರತ್ವವಿರಬಹುದು ಎಂಬ ಕಲ್ಪನೆಯಾದರೂ ಬರುವದು ಹೇಗೆ? ಹೆಂಗಸು ಎಂದರೆ ಹಿಂದುಳಿದವಳು ಎಂದು ಹಿಂಡಿ ಹಿಚುಕುವವರಿಗೆ, ಅವಳು ಹೀನಳಲ್ಲ, ಹಿಂದುಳಿದವಳಲ್ಲ ಎಂದು ತಿಳಿದು, ಅವಳೊಡನೆ ಸಮಭಾವನೆಯಿಂದ ವರ್ತಿಸುವದು ಶಕ್ಯವಿದೆ ಎಂಬ ಕಲ್ಪನೆಯು ಬರುವದಾದರೂ ಹೇಗೆ? ಅಬಲೆಯೆಂದ ಕೂಡಲೆ ಅಲ್ಲಗಳೆಯುವವರಿಗೆ, ಅವಳೊಡನೆ ಆದರದಿಂದ ವರ್ತಿಸುವದು ಶಕ್ಯವಿದೆ ಎಂಬ ಕಲ್ಪನೆಯು ಬರುವದಾದರೂ ಹೇಗೆ? ಹೆಂಗಸರ ಕೂಡ ಮಾತೆಂದರೆ 'ಪಾಪ' ಎನ್ನುವವರಿಗೆ ಅವರಿಗಾಗಿ ದಾರಿಕಾಯುವದೆಂದರೆ ನಾಚಿಕೆಗೇಡಿತನವಲ್ಲದೆ ಮತ್ತೇನು? ಹೆಂಗಸಿಗೆ ಆತ್ಮವಿಲ್ಲ, ಅವಳು ಗಂಡಸಿನ ನೆಳಲು ಎಂದು ಒಂದು ತಿಳುವಳಿಕೆ. ಆ ತಿಳು

ವಳಿಕೆಯೂ ತಕ್ಕದೆ. ಹಿಂದಿನ ಕವಿಗಳು ಹೆಂಗುಸನ್ನು ಚಂದ್ರನಿಗೆ ಹೋಲಿಸುತ್ತಿದ್ದರು. ಚಂದ್ರನು ಸ್ವಯಂ ಪ್ರಕಾಶಿಯಲ್ಲ. ಸೂರ್ಯನ ಬೆಳಕಿನಿಂದ ಹೊಳೆಯುವವ. ಹೆಂಗಸು ಎಂದರೆ ಚಂದ್ರನಂತೆಯೆ ಅಲ್ಲವೆ? ಇದರಲ್ಲಿ ನಿಮ್ಮದಾದರೂ ಏನು ದೋಷ? ಅಂದಿನಿಂದ ಇಂದಿನವರೆಗೆ ನಡೆದುಬಂದ ಸಂಸ್ಕಾರದ ಫಲ. ಹೆಂಗಸಿಗೆ ಸ್ವಾತಂತ್ರ್ಯವಿಲ್ಲೆಂದು ಸಾರಿ ಸಾವಿರಾರು ವರುಷಗಳಾದವು. ಅಂಥ ಹೆಂಗಸು – ಅಂದರೆ ಕಲೆಯು ಕಾಂತನ ಕೂಡ ಸ್ವೇಚ್ಛೆಯಿಂದ ನಡೆಯುವಳು ಎಂದು ಕೇಳಿ ಸಂತಾಪವಾಗದೆ ಇಂದು? ಹೆಂಗಸಿನಲ್ಲಿ ಉಣಿಸಿ ಬೆಳೆಸುವ ಮಾತೆಯನ್ನು ಕಾಣುವೆವು. ಹೆಂಗಸಿನಲ್ಲಿ ವಾತ್ಸಲ್ಯಪೂರ್ಣರಾದ ಅಕ್ಕತಂಗಿಯರನ್ನು ಕಾಣುವೆವು. ಹೆಂಗಸಿನಲ್ಲಿ ನಕ್ಕುನಲಿಯುವ, ನಗಿಸಿ ನಲಿಸುವ ಮಡದಿಯನ್ನು ಕಾಣುವೆವು. ಇಂತಹ ಹೆಂಗಸಿನಲ್ಲಿ ಮಿತ್ರ-ಪ್ರೇಮಪೂರಿತ ಬಂಧುವಿನಕಿಂತಲೂ, ಅಕ್ಕರೆಯಿಂದೊಡಗೂಡಿವ ಮಿತ್ರಳನ್ನು ಕಾಣಲಾರೆವೊ?

'ಅದಿರಲಿ, ಈ ಕಲೆಯು ಯಾರು?' ಸಡಗರದಿಂದ ಹೇಳುವೆ. ಅಸಹ್ಯತನವನ್ನು ಆಚೆಗಿರಿಸಿ ಆತುರತೆಯಿಂದ ಹೇಳುವೆ. ನಾಚಿಕೆಗೇಡಿತನವನ್ನು ಮರೆಮಾಡಿ, ಮರ್ಯಾದೆಯಿಂದ ಹೇಳುವೆ. ಕಲೆಯು ಯಾರು? ಕಲೆಯು ಕಾಂತನ ಕ್ಲಾಸಮೇಟು–ಎಂದರೆ ಅವನ ಸಹಚಾರಿ; ಇಷ್ಟಕ್ಕೆಯೆ ಅವಳ ಪರಿಚಯವಾಗದು. ಅವಳ ಪರಿಚಯವನ್ನು ಮಾಡಿಕೊಡುವುದು ಅವಳ ರೂಪಲಾವಣ್ಯಗಳ ವರ್ಣನೆಯಿಂದೊ? ಅವಳ ಉಡುಪು–ತೊಡಪುಗಳ ವೈಖರಿಯಿಂದೊ? ಅವಳ ಮಾತಿನ ಮಾಧುರ್ಯದಿಂದೋ? ಅವಳು ಇದ್ದಂತೆಯೆ ಅವಳನ್ನು

ವರ್ಣಿಸುವದು ಯೋಗ್ಯವೆಂದು ನಮ್ಮ ಅಭಿಪ್ರಾಯ. ಕಲೆಯು ಬಲು ಚೆಲುವೆ. ತೆಳ್ಳನ್ನ ದೇಹ. ತಿಳಿಯಾದ ಬಂಣ. ಸ್ವಲ್ಪು ಉದ್ವವಾದರೂ ಎದ್ದುಕಾಣುವ ಮುಖ. ಮಾತಿನಿಂದ ಮೃದು. ನೋಟದಿಂದ .... ನೋಟದಿಂದ.... ಏನೆಂದು ಹೇಳಬೇಕು? ಅವಳ ನೋಟವನ್ನು ವರ್ಣಿಸಬೇಕೆಂದರೆ ಶಬ್ದಗಳೇ ಸಾಲವು. ಅವಳ ಉಡುಪು ತೊಡವುಗಳಲ್ಲಿ ಒಂದು ತರದ ವೈಶಿಷ್ಟ್ಯವಿದೆ. ತರತರದ ಬಣ್ಣದ, ತರತರದ ಅಂಚಿನ ಶೀರೆ ಕುಪ್ಪಸಗಳನ್ನು ಸಂಗ್ರಹಿಸುವ ಕಲೆಯೂ ಕಲೆಯದೇ ಆಗಿತ್ತು. ಇದನ್ನು ಕಂಡು ಅವಳ ತಂದೆ ತಾಯಂದಿರು ಆಕೆಯನ್ನು ಕಲೆಯೆಂದು ಕರೆಯುತ್ತಿದ್ದರೇನೋ! ಏನೇ ಇರಲಿ. ಕಲೆಯನ್ನು ಒಮ್ಮೆ ಕಂಡರೆ ಸಮಾಧಾನವಾಗದೆ ಮತ್ತೊಮ್ಮೆ; ಮತ್ತೊಂದೆರಡು ಸಲ, ಅದೇಕೆ ಮೇಲಿಂದ ಮೇಲೆ ಕಾಣುವ ಕುತೂಹಲವಾಗದೆ ಇರದು. ಇಂತಹ ಕುತೂಹಲವೇ ಕಲಾ-ಕಾಂತರ ಮಿತ್ರತ್ವದ ಕಾರಣ.

ಓಹೊ! ಕಾಂತನೆಂದ ಕೂಡಲೆ ಒಮ್ಮೆಲೆ ಸ್ಮರಣೆಯಾಯಿತು. ಕಲೆಯನ್ನು ಬಣ್ಣಿಸುವ ಭರದಲ್ಲಿ (ಭ್ರಮದಲ್ಲಿ ಎನ್ನಿರಿ ಬೇಕಾದರೆ) ಕಾಂತನನ್ನು ಮರೆತೇ ಬಿಟ್ಟೆವು. ಕಾಂತನು ಕಲೆಗಾಗಿ ಕಾಯುತ್ತಿದ್ದನು. ಕಾದು ಕಾದು ಬೇಸತ್ತನು. ಗಡಿಯಾರವನ್ನು ನೋಡಿದನು. ದುಃಖಕಷ್ಟಗಳ ಪರಿವೆಯಿಲ್ಲದೆ ಸಾಗುವದರಲ್ಲಿ ಶೂರನೆಂಬ ಹೆಮ್ಮೆಯಿಂದ ಸಾಗಿತ್ತು. ಗಡಿಯಾರದಲ್ಲಿ ನಾಲ್ಕೂವರೆ ಗಂಟೆಯಾಗಿತ್ತು. ಎರಡುಗಂಟೆಗೆ ಬರುವೆನೆಂದು ಹೇಳಿದ ಕಲೆ, ಇಷ್ಟು ಹೊತ್ತಾದರೂ ಬಾರದ್ದನ್ನು ನೋಡಿ ಕಾಂತನು ಕಾತರಗೊಂಡನು. ಇಷ್ಟು

ಹೊತ್ತಾದರೂ ಕಲೆ ಏಕೆ ಬರಲಿಲ್ಲ ಎಂಬದೊಂದೇ ಕಲ್ಪನೆಯು ಕಾಂತನನ್ನು ಬಾಧಿಸಹತ್ತಿತು. ಅವಳು ಬಾರದ್ದಕ್ಕೆ ಕಾರಣವನ್ನು ಹುಡುಕಲಾರಂಭಿಸಿದ. ಅವಳ ಹಿರಿಯರು ಹೋಗಬೇಡ ಎಂದಿರಬಹುದೋ ಎಂಬ ವಿಚಾರವು ಹೊಳೆಯಿತು ಅವನಿಗೆ. ಮರುಕ್ಷಣವೇ ಅದು ಶಕ್ಯವಿಲ್ಲ ಎನ್ನಿಸಿತು. ಕಲೆಗೆ ಹಿರಿಯರೆಂದರೆ ಅವಳ ತಾಯಿ ಒಬ್ಬಳೆ. ತಾಯಿಯು ತನ್ನನ್ನು ಪೂರಾ ಬಲ್ಲಳು ಎಂಬ ಹೆಮ್ಮೆಯು ಬಹಳ ಇತ್ತು ನಮ್ಮ ಕಾಂತನಿಗೆ. ಅದಕ್ಕೆಂದೇ ಅದು ಶಕ್ಯ ಕಾಣಲಿಲ್ಲ. ಬರುವಾಗ್ಗೆ ಹಾದಿಯಲ್ಲಿ ಯಾರಾದರೂ ಗೆಳತಿಯರು ಭೆಟ್ಟಿಯಾಗಿರಬಹುದೆ? ಗೆಳತಿಯರು ಭೆಟ್ಟಿಯಾದರೂ ಬರುವದನ್ನು ಬಿಡಲಾರಳು ಎಂಬ ವಿಚಾರವೂ ಬಂದಿತು ಅವನಿಗೆ. ಎಲ್ಲ ಮಿತ್ರರಲ್ಲಿ ಹೆಚ್ಚಿನ ಮಿತ್ರನೆಂದರೆ ತಾನು, ಎಲ್ಲರಲ್ಲಿ ಹೆಚ್ಚಿನ ಪ್ರೀತಿಯವನೆಂದರೆ ತಾನು, ಎಲ್ಲರಲ್ಲಿ ಅವಳ ಆದ-ರಕ್ಕೆ ಪಾತ್ರನಾದವನೆಂದರೆ ತಾನು! ಇಂತಹ ತನ್ನನ್ನು ಬಿಟ್ಟು-ಅಂದರೆ ತನ್ನೆಡೆಗೆ ಬರುವದನ್ನು ಬಿಟ್ಟು ಗೆಳತಿಯರ ಕೂಡ ಹೋಗಿರಲಾರಳು ಎಂಬ ಮನದ ಮಾತಿನಿಂದ ಮನಸ್ಸನ್ನು ಶಾಂತಮಾಡಲೆಳಸಿದನು....ಅಥವಾ ಅವಳಿಗೇ ತನ್ನೆಡೆ ಬಾರಲು ಬೇಸರವಾಗಿದ್ದೀತೆ? ಈ ವಿಚಾರವು ಬಂದಕೂಡಲೆ ಅವನ ಮೈ ಜುಮ್ಮೆಂದಿತು. ಚಳಿಗಾಲದಲ್ಲಿ ತಣ್ಣೀರು ಸ್ನಾನಮಾಡಿದಂತಾಯಿತು ಕಾಂತನಿಗೆ. ತಾನು ಬೇಸರವಾಗುವಂತಹದೇನೂ ತನ್ನಿಂದ ಘಟಿಸಿಲ್ಲ ಎಂಬ ನಂಬಿಕೆಯಿಂದ ಆ ವಿಚಾರವೂ ಅಡಗಿತು.

ಇವೇ ಮೊದಲಾದ ವಿಚಾರಗಳಲ್ಲಿ ತೊಡಗಿದಾಗ, ಅವಳು ಬಾರದ ಕಾರಣವನ್ನು ಯೋಚಿಸತೊಡಗಿದಾಗ, ಹೊರಗೆ

ಯಾರೋ ಬಂದಂತಾಯಿತು– ಬಂದಂತೆ ಸದ್ದಾಯಿತು. ಸದ್ದಿನ ಸಂಗಡವೇ ಹೊರಗೆ ಸಾಗಿದನು. ಸದ್ದು ಕಲೆಯದೇ ಎಂಬ ಹುರುಪಿನಿಂದ ಕಾಲಿಟ್ಟನು – ಬಾಗಿಲದ ಹೊರಗೆ. ಆದರೆ ಯಾರೂ ಬಂದಿರಲಿಲ್ಲ. ಬಂದಂತೆ ಅವನಿಗೆ ಭಾಸವಾದುದು ಮಾತ್ರ ನಿಜ. ಬಹುದಿವಸಗಳಿಂದ ಕಟ್ಟಿ ತ್ತಿದ್ದ ಆಶಾಮಂದಿರವೇ ಕಳಚಿಬಿದ್ದಂತಾಯಿತು ಕಾಂತನಿಗೆ. ಹೊರಕ್ಕೆ ಕಾಲಿಟ್ಟವನು ಒಳಕ್ಕೆ ಬಂದನು. ಬಂದವನೇ ಕುಕ್ಕರಿಸಿದನು ಕುರ್ಚಿಯ ಮೇಲೆ. ಮನಸ್ಸಿನಲ್ಲಿಯೆ ಕಲೆ ಬಾರದಿರುವದನ್ನು ಮರೆಯಲು ಪ್ರಯತ್ನಿಸಿದನು. ಎಷ್ಟು ಪ್ರಯತ್ನಬಟ್ಟರೂ–ಮತ್ತೆ ಕಲೆ, ಮತ್ತೆ ಅವಳು ಬಾರದ ಕಾರಣ, ಇದೇ ಅವನ ಮನಸ್ಸಿನಲ್ಲಿ. ಇದೇ ಸಮಯಕ್ಕೆ ಮತ್ತೆ ಯಾರೋ ಬಂದಂತೆನ್ನಿಸಿತು ಕಾಂತನಿಗೆ. ಕೋಣೆಯ ಕಿಡಿಕಿಯಿಂದ ಇಣಿಕಿ ನೋಡಿದ, ಆದರೆ ಬಂದವರು ಕಲೆಯಾಗದೆ ಕಾಂತನ ಗೆಳೆಯನಾಗಿದ್ದನು. ಗೆಳೆಯನು ಬಂದಕೂಡಲೆ ಮೈಮರೆತು ಮಾತನಾಡುವ ಕಾಂತನು ಇಂದು ಮಾತನಾಡದಿರುವದನ್ನು ನೋಡಿ ಕಿಟ್ಟಿಗೆ ಆಶ್ಚರ್ಯವಾ ಯಿತು. ಕಾಂತನನ್ನು ಮಾತನಾಡಿಸಲು ಯತ್ನಿಸಿದ ಕಿಟ್ಟಿ; ನಗಿಸಲು ಯತ್ನಿಸಿದ. ಆದರೆ ಅವನ ಎಲ್ಲ ಯತ್ನಗಳು ನಿಷ್ಫಲವಾದವು. ಮಾತನಾಡದವರನ್ನು ಮಾತನಾಡಿಸುವ ದರಲ್ಲಿ, ನಗದವರನ್ನು ನಗಿಸುವದರಲ್ಲಿ ತನ್ನನ್ನು ಸರಿಗಟ್ಟದವ ರಾರೂ ಇಲ್ಲೆಂಬ ಅವನ ಹೆಮ್ಮೆಯು ಮಾಯವಾಯಿತು. ಕೂಡಲೆ ಗೆಳೆಯರ ದುಃಖದ ಕಾರಣವನ್ನು ತಿಳಿದುಕೊಳ್ಳುವ ಕುತೂಹಲವುಂಟಾಯಿತು. ಆದರೆ ತಿಳಿದುಕೊಳ್ಳುವದು ಹೇಗೆ ? ಗೆಳೆಯನನ್ನು ಕೇಳಿಯೆ ? ಛೇ, ಶಕ್ಯವಿಲ್ಲ. ಬಂದಾಗ್ಯೆ

'ಬಾ' ಎನ್ನದವನು, ಮಾತನಾಡಿಸಿದರೆ ಮಾತನಾಡದವನು, ಕೇಳಿದರೆ ಕಾರಣವನ್ನು ಹೇಳಬಹುದೆ? ನೋಡಿರಿ ನೀವು ಕೂಡ ತಲೆ ಅಲ್ಲಾಡಿಸುವಿರಿ. ಅಂದ ಮೇಲೆ ಅವನು ಹೇಳು ವದಾದರೂ ಹೇಗೆ? ಅಷ್ಟರಲ್ಲಿ 'ಟಿಸ್' ಎಂಬ ಸಪ್ಪಳ. ಕಾಂತನು ಕಿವಿಗೊಟ್ಟು ಕೇಳಿದನು. ಮತ್ತೆ ಅದೇ ಸಪ್ಪಳ. ಆತುರತೆಯಿಂದ ಬಾಗಿಲವನ್ನು ತೆರೆದನು – ಅವನ ದಾಯಿ! ಬಾಗಿಲವನ್ನು ಇಕ್ಕಿ ಸುಮ್ಮನೆ ಕುಳಿತುಕೊಂಡನು. ಸಮಾಧಾನವಾಗಲಿಲ್ಲ. ಕಿಟ್ಟಿಯನ್ನು ಕಡೆಗೆ ಕೇಳಿದ

"ಕಲೆಯನ್ನು ಕಂಡಿರುವಿಯಾ ಇಂದು?" ನಕ್ಕನು ಕಿಟ್ಟಿ ಅದಕ್ಕೆ; ಕಾಂತನು ಮತ್ತಷ್ಟು ರೇಗಿದ. ಆದರೆ ಕಿಟ್ಟಿಯು ನಕ್ಕದ್ದು ತನಗೆ ಕಾರಣವು ತಿಳಿಯಿತೆಂಬ ಆನಂದದಲ್ಲಿ, ವಿಚಾರಪರವಶನಾದ ಕಾಂತನು ವಿವೇಕಶೂನ್ಯನಾಗಿ, ಕಿಟ್ಟಿ ತನ್ನನ್ನು ನೋಡಿ ನಕ್ಕನು ಎಂದು ಸಿಟ್ಟಿಗೆದ್ದ. ಇಂತಹ ಸಮಯದಲ್ಲಿ 'ಕಾಂತಾ' ಎಂಬ ಶಬ್ದವು ಕೇಳಿಸಿತು. ಸರಸವಾದ ಧ್ವನಿ–ಇಂಪಾದ ಕೂಗು. 'ಈ ಸ್ವರವು ಕಲೆಯದೇ, ಮಿಕ್ಕವರ ಧ್ವನಿಯು ಇಷ್ಟು ಮಧುರವಾದುದಿಲ್ಲ ಎಂದು ಕಾಂತನ ಕಾಯಾಸ–ನಂಬಿಕೆ. 'ಕಲಾ, ಕಲಾ' ಎಂದು ಬಾಗಿಲ ಬಳಿಗೆ ಬಂದು, ಬಾಗಿಲ ತೆರೆದನು – ಆದರೆ ಅಲ್ಲಿ ಬಂದವಳು ಕಾಂತನ ತಂಗಿ ಕಮಲೆ!

ತನ್ನಲ್ಲಿ ತಾನೇ ಬೇಸತ್ತು, ತನಗಾಗಿ ತಾನೇ ನಕ್ಕು, ಬಟ್ಟೆಗಳನ್ನು ಧರಿಸಿಕೊಂಡು ಕಿಟ್ಟಿಯ ಸಂಗಡ ಹೊರಹೊರಟನು. ಅವರು ಮನೆಯನ್ನು ಬಿಟ್ಟಾಗ್ಗೆ ಮುಚ್ಚಂಜೆಯ ಸಮಯ, ಸೂರ್ಯನು ಅಸ್ತನಾಗುವದರಲ್ಲಿದ್ದನು. ಕಾಂತನ ಮನಸ್ಥಿತಿಯನ್ನು ನೋಡಲಾರದೆ ಸೂರ್ಯನು ಮರಗುತ್ತಿದ್ದಂತೆ

ಕಂಡಿತು. ಸೂರ್ಯನು ಮುಳುಗಿದನು; ಕತ್ತಲೆಯೂ ಕವಿಯಿತು. ಕಾಂತನಿಗೆ ಒಳಗೂ ಹೊರಗೂ ಕತ್ತಲೆ ಕವಿದಂತಾಗಿ ದಾರಿಯು ಕಾಣದಂತಾಯಿತು. ಮೇಲೆ ನೋಡಿದ. ನಕ್ಷತ್ರಗಳು ನಲಿಯುತ್ತಿದ್ದವು. ಅವು ಕೂಡ ತನ್ನನ್ನು ನೋಡಿ ನಗುವವೆಂದು ನಾಚಿದನು ಕಾಂತ. ಆ ನಾಚಿಕೆಯಲ್ಲಿ ತಲೆ ಬಾಗಿಸಿ ನಡೆದುದು ಅವನಿಗೆ ತಿಳಿದಿರಲೇ ಇಲ್ಲ. ಆದರೆ ಒಮ್ಮೆಲೆ ಅವನು ದೂರದಿಂದ ಬರುವ ಒಂದು ಮೂರ್ತಿಯನ್ನು ಕಂಡನು. ಅಲ್ಲಿಂದಲೆ ಗುರುತಿಸಿದ ಅವಳ ದುಂಡನ್ನ ತೋಳುಗಳನ್ನು. ಆ ಮೂರ್ತಿಯು ಸನಿಹಕ್ಕೆ ಬಂದೊಡನೆ ಅವನಿಗೆ ಕುಂಕುಮದ ಚಿಕ್ಕೆಯೂ ಕಂಡಿತು. ಆಗಸದಲ್ಲಿಯ ನಕ್ಷತ್ರಗಳಕಿಂತಲೂ ಆ ಲಲಾಟದಲ್ಲಿಯ ನಕ್ಷತ್ರವೆ ಹೆಚ್ಚು ಹೊಳೆಯುವಂತೆ ತೋರಿತು ಅವನಿಗೆ. 'ಇವಳು ನನ್ನ ಕಲೆಯೆ ಇರಬಹುದೆ ?' ಎಂಬ ಉತ್ಸಾಹ ಕಾಂತನಿಗೆ. ಅದಕ್ಕೆ ಉತ್ತರವೇನೋ ಎಂದಾಕೆ 'ಕಾಂತಾ' ಎಂದ ಕನಿಕರದ ಕೂಗು ಬಿತ್ತು ಅವನ ಕಿವಿಗಳಲ್ಲಿ. ಅಂತಹ ಕಗ್ಗತ್ತಲೆಯಲ್ಲಿ ಕಾಂತನು ಚಂದ್ರನನ್ನು ಕಂಡನು.

# ಆಶೀರ್ವಾದ

[ ಸಂಜೆಯ ೫ ಗಂಟೆಯ ಸಮಯ ರಾಯರು ಆದೇ ತಾನೆ ಮನೆಗೆ — ಆಫೀಸಿನಿಂದ– ಬಂದು ಕೈಕಾಲು ಮುಖ ತೊಳೆದು ಕೊಂಡು ಒರಿಸಿಕೊಳ್ಳುತ್ತಾ ರಂಗಭೂಮಿಯ ಎದುರಿನಲ್ಲಿ ಕಾಣುವ ಒಳಕ್ಕೆ ಹೋಗುವ ಬಾಗಿಲಿನಿಂದ ಬರುವರು. ಉಟ್ಟದ್ದು ಒಂದು ಧೋತರ, ತೊಟ್ಟದ್ದು ಪೈರಣು — ಶರ್ಟ ಅಲ್ಲ ! — ಯಾಕಂದರೆ ಹಳೆಯ ಪದ್ಧತಿಯವರು ರಾಯರು. ಪ್ರೇಕ್ಷಕರ ಬಲಕ್ಕೆ ಅಂದರೆ ರಂಗಭೂಮಿಯ ಎಡಕ್ಕೆ — ಅಂದರೆ ಎದುರಿಗಿನ ಬಾಗಿಲದ ಎಡಕ್ಕೆ ಒಂದು ಮೇಜು, ಒಂದೆರಡು ಕುರ್ಚಿಗಳು. ಬಲಕ್ಕೆ ಒಂದು ಜಮ ಖಾನೆ ಒಂದೆರಡು ಲೋಡುಗಳು. ತೆರೆಯು ಮೇಲಕ್ಕೆ ಏಳುವಾಗ ಅಥವಾ ಎದ್ದ ಮೇಲೆ ರಾಯರು ಒಳಬಾಗಿಲಿನಿಂದ ಕೈಕಾಲುಗಳನ್ನು ಒರಿಸಿಕೊಳ್ಳುತ್ತ ಬರುವರು. ಬಂದವರೇ ಮೇಜಿನ ಮೇಲಿನ 'ಕೇಸರಿ' ವರ್ತಮಾನಪತ್ರವನ್ನೂ ತೆಗೆದುಕೊಳ್ಳುವರು. 'ಕೇಸರಿ'ಯನ್ನು ನೋಡಿದ ಕೂಡಲೇ ರಾಯರು ಮರಾಟಿಗರು ಎಂದು ಪ್ರೇಕ್ಷಕರ ಕಲ್ಪನೆ ಆಗುವ ಸಂಭವವುಂಟು. ಆದರೆ ರಾಯರು ಕನ್ನಡಿಗರು, ಕರ್ನಾಟಕದವರು. ಕರ್ನಾಟಕದಲ್ಲಿಯೇ ಹುಟ್ಟಿದವರು, ಬೆಳೆದವರು. ಕನ್ನಡಿಗರಾದರೂ ಮರಾಠಿ ವೃತ್ತಪತ್ರವನ್ನೇ ಓದುವರು. 'ಕೇಸರಿ' ಯನ್ನು ತೆಗೆದುಕೊಂಡು ಕುರ್ಚಿಯ ಮೇಲೆ ಕುಳಿತುಕೊಳ್ಳುವರು. ಓದತೊಡಗುವರು. ಅಷ್ಟರಲ್ಲಿಯೇ ರಂಗಭೂಮಿಯ ಎಡಬದಿಯ ಬಾಗಿಲಿನಿಂದ ಓರ್ವ ವ್ಯಕ್ತಿಯು ಬರುವದು. ಉಟ್ಟದ್ದು ಒಂದು ಧೋತರ, ಹೊತ್ತದ್ದು ಒಂದು ಶಾಲು, ಆ ವ್ಯಕ್ತಿಯು ಬಂದು ಕಾಲ ಲ್ಲಿಯ ಮೊಚ್ಚೆಯನ್ನು ತೆಗೆದೂ ಬರುವಷ್ಟರಲ್ಲಿ—]

ರಾಯರು:– ಏನೆ! ಏ, ಬಾ ಇಲ್ಲಿ. ['ಬಾಯರು' ಎಂದರೆ ರಾಯರ ಹೆಂಡತಿ ಬಂದು ಎದುರಿಗಿನ ಬಾಗಿಲಲ್ಲಿ ನಿಂತು ಕೊಳ್ಳುವರು. ನಂತರ ರಾಯರು ಬಂದ ಆ ಬ್ರಾಹ್ಮಣನನ್ನು ಉದ್ದೇಶಿಸಿ ಹೆಂಡತಿಗೆ] ಇವನು, ಏನು ಮುಂಜಾನೆ ಊಟಕ್ಕೆ ಬಂದನೋ ಇಲ್ಲೋ ?

ಬಾಯರು: – ಅಯ್ಯ ! ಅವರ ಊಟದ್ದೂ ಒಂದು ರಾಮಾಯಣನೆ ಅದs !

ರಾಯರು:— ಊಟದ ರಾಮಾಯಣ ಕೇಳಲಿಲ್ಲ ನಾನು. ಇವನು ಊಟಕ್ಕೆ ಯಾವಾಗ ಬಂದ ಅಂತ ಕೇಳಿದೆ.

ಬಾಯರು:— ಅದನ್ನೇ ಹೇಳುವೆ ನಾನು. ಅವರು ಮನಿಗೆ ಬಂದು ಊಟವನ್ನು ತೀರಿಸುವಷ್ಟರಲ್ಲಿ ಒಂದು ರಾಮಾಯಣನೇ ಆಯಿತು ಅಂತ.

ರಾಯರು: – ನಿನ್ನ ರಾಮಾಯಣ, ಮಹಾಭಾರತ ಬೇಡ ನನಗೆ.

ಹೆಂಡತಿ:— ಬೇಡವಾದರೆ ಬಿಡಿರಿ. ಅವರು ಊಟಕ್ಕೆ ಬಂದ ಸಂಗತಿಯನ್ನಾದರೂ ಹೇಳಲಿಯೋ ಏನು ಬೇಡವೋ?

ರಾಯರು:— ಹುಂ.

ಬಾಯರು: – ಅವರು ಮನಿಗೆ ಬಂದಾಗ್ಗೆ ಏನೂ ಇಲ್ಲಾ ಅಂದರೂ ಆರು ತಾಸಿನ ಮೇಲೆ ಆಗಿತ್ತು. ಬಂದವರೇ ಉಃಶ ಅಂತ ಲೋಡಿಗೆ ಆತು ಕುಳಿತುಕೊಂಡರು. ಪ್ರಾಣಿ ಬಹಳ ತಿರುಗಾಡಿ ಬಂದಿದ್ದರೋ ಏನೋ ?

ರಾಯರು:—ಏನೋ ! ಇಷ್ಟು ಉಃಶ ಅಂತ ಬಂದು ಲೋಡಿಗೆ ಬಿದ್ದುಕೊಳ್ಳುವಷ್ಟು ತಿರುಗಾಡಿದ ಮೇಲೆ ದೇಶಾ-ವರೀ ಆದರೂ ಎಷ್ಟು ದೊರಕಿಸಿರುವಿಯೋ ? ವೆಂಕಂಣಾ ?

ಬಾಯರು:— ಅಯ್ಯ! ದೇಶಾವರೀದು ಏನು ಕೇಳುವದು. ಅದೂ ಒಂದು ಮೋಜಃ ಅದ.

ಬಾಯರು:— ಅಂದರೆ ಒಂದು ನೂರು ರೂಪಾಯಿ ತಂದಿರುವನೋ ಏನು ?

ಬಾಯರು:— ಮೋಜು ಅಂದರೆ ಒಂದು ನೂರು ರೂಪಾಯಿಯಂತೆ ! ಅಲ್ಲ, ದೇಶಾವರಿ ಹಕೀಕತ್ತನ್ನಾದರೂ ಕೇಳಿರಿ. ಆ ಮೇಲೆ ಹೇಳುವಿರಂತೆ ಮೋಜು ಅಂದರೆ ಏನು ಅನ್ನುವದನ್ನೂ.

ರಾಯರು:— ಹೇಳಿಯಾದರೂ ಹೇಳು ಹಾಗಾದರೆಃ.

ಬಾಯರು:— ಕೇಳಿರಿ ಅಂದರೆ ನನಗೆ ಹೇಳು ಅನ್ನುತ್ತಾರೆ. ಎಂಕಂಣಾಚಾರ ಬಾಯಿಯಿಂದಲೇ ಕೇಳಿರಿ ಅಂದರೇನೇ ಅದರ ಮೋಜು, ಪುರಾಣಾ ಹೇಳಿದ ಬಾಯಿ ಅದು.

ರಾಯರು:—ಏನೋ ವೆಂಕಂಣಾ, ಎಲ್ಲಿಗೆ ಹೋಗಿದ್ದಿ. ಯಾರಮನಿಗೆ ಹೋಗಿದ್ದಿ ? ಯಾರು ಎಷ್ಟುಕೊಟ್ಟರು ?

ವೆಂಕಣ್ಣ: —ಮೊದಲಿಗೆ ರಾಯರೆ, ಖರೇ ಹೇಳಬೇಕಂದರೆ, ಬ್ರಾಹ್ಮಣರ ಹೊಟ್ಟೆ ತುಂಬುವ ದಿನಗಳು ನಿಂತು ಹೋಗಿವೆ. ಒಮ್ಮೊಮ್ಮೆ ನನಗೆ ಹೀಗೆ ಅನ್ನಿಸುತ್ತದೆ. ಇಂತಹ ಧಂದೆ ಮಾಡಬಾರದು ಅಂತ ?

ಬಾಯರು:—ಮಾಡಬಾರದು ಅಂತ ಅನ್ನುವಿರಿ; ಆದರೆ ಕಂಡಕಂಡವರ ಮನಿಗೆ ಹೋಗಿ ಆಶೀರ್ವಾದ ಮಂತ್ರಾ ಅಂತೀರಿ

ವೆಂಕಣ್ಣ:— ಏನು ಮಾಡಬೇಕು ಹೇಳಿರಿ. ನಾ ಏನೂ ಹೋಗುತ್ತಿದ್ದಿಲ್ಲ. ಆದರೆ ಏನು ಮಾಡುವದು.

ಮಗಳು ಬೆಳದ ನಿಂತಾಳ. ಮದಿವಿ ಅನಕಾ ಮಾಡಲೇಬೇಕಲ್ಲ. ಇನ್ನು ಒಂದು ವರ್ಷ ಬಿಟ್ಟರೆ ೧೧ ತುಂಬುತ್ತವೆ.

ರಾಯರು:— ಅದಕ್ಕೆ ಆಶೀರ್ವಾದ ಮಂತ್ರಾ ಅಂದು, ಮಗಳ ಬೆಳವಣಿಗಿ ಕಡಿಮೆಮಾಡುವೆಯಾ.

ವೆಂಕಣ್ಣಾ:— ಅಲ್ಲಾ ಆಶೀರ್ವಾದ ಮಂತ್ರಾ ಅಂದು ಮಗಳ ಮದಿವಿ ಮಾಡತೇನಿ, ಅಂದರೆ, ಮಾಡಬೇಕು ಅಂತ ಅನ್ನುವೆ.

ರಾಯರು:—ಆಶೀರ್ವಾದ ಮಂತ್ರದಿಂದಾ ಹುಡುಗೆಯರ ಮದುವೆ ಆಗುತ್ತಿದ್ದರೆ ಹೆಣ್ಣು ಹಡೆದವರು ಗೋಳಿಗೆ ಈಡಾಗುವ ಪ್ರಸಂಗವೇ ಬರುತ್ತಿರಲಿಲ್ಲ.

ವೆಂಕಂಣ:—ಹಾಗಲ್ಲಾ ರಾಯರೆ, ಮಂತ್ರದಿಂದ ಹುಡುಗೆಯರ ಮದಿವಿ ಆಗುವದು ಅಂತ ಅಲ್ಲಾ; ಅದರಿಂದಾ ದುಡ್ಡು ಗಳಿಸಲು ಬರುವದು

ರಾಯರು:— (ಆಶ್ಚರ್ಯದಿಂದ) ಏನು ?

ವೆಂಕಣ್ಣ:— ಅಂದರೆ ಭಾವಿಕರಿಂದ ದುಡ್ಡು ಸಿಗುವ ಸಂಭವವಿದೆ.

ಬಾಯರು:— ದುಡ್ಡು ತೆಗೆದುಕೊಂಡು ಮಾಡುವದಾದರು ಏನು ಹೇಳಿರಿ ! ಈಗಿನ ದಿವಸದಲ್ಲಿಯಂತೂ ಯಾರೂ ವರದಕ್ಷಿಣಿ ಬೇಡುವದೇ ಇಲ್ಲ ಅಂತ.

ವೆಂಕಣ್ಣಾ:—(ಸಿಟ್ಟಿನಿಂದ) ಬೇಡುವದೇ ಇಲ್ಲಾ ಅಲ್ಲ ಇಲ್ಲ.

ಬಾಯರು:— ಹಾಗಲ್ಲ ಆಚಾರ. ವರದಕ್ಷಿಣಿ ಪದ್ಧತಿ ಕೆಟ್ಟದ್ದು, ಅದರಿಂದ ಎಷ್ಟೋ ಹುಡುಗೆಯರು ಜೀವಕ್ಕೆ ಎರ

ವಾಗುತ್ತಾರ ಅಂತ. ಈಗ ವರದಕ್ಷಿಣಿ ಕೇಳುವದು ಬಿಟ್ಟಾರಂತರಿ.

ವೆಂಕಣ್ಣಾ:— ನೀವು ಹುಚ್ಚರು ಇದ್ದೀರಿ, ಆಯಿತು. ಇವೆಲ್ಲಾ ವಿಚಾರ ಹೆಣ್ಣು ಹುಡುಗೆಯ ಮದಿವಿ ಮಾಡುವ ಕಾಲಕ್ಕೆ ಅಷ್ಟೇ ಬರುತ್ತವೆ. ಅದೇ ಹುಡುಗರ ಮದಿವಿ ಮಾಡುವ ಮುಂದೆ ಮನಸ್ಸಿಗೆ ಬಂದ ಹಾಗೆ ದುಡ್ಡು ಕೇಳುವರು.

ರಾಯರು:— ನೀನು ಹೇಳುವದು ಹಿರಿಯರ ಮಾತು. ಈಗಿನ ದಿವಸದಾಗ ಹುಡುಗರು ರೊಕ್ಕ ನೋಡಿ ಅಲ್ಲಾ ಮದಿವಿ ಮಾಡಿಕೊಳ್ಳುವದು, ಆದರೆ ಕನ್ಯಾ ನೋಡಿ.

ವೆಂಕಣ್ಣಾ:— (ನಿರ್ಧಾರದಿಂದ) ಇದೂ ಒಂದು ತಪ್ಪು ಕಲ್ಪನೆ; ಈಗಿನ ಹುಡುಗರ ಸುಧಾರಣಾ ಬರಿಯ ಮಾತಿನಲ್ಲೇ, ಕೃತಿಯಲ್ಲಿ ಇರುವದೇ ಇಲ್ಲಾ. ನೋಡಿರುವಿರೋ ಇಲ್ಲೋ ಆ ಶ್ರೀನಿವಾಸರಾಯರ ಮಗನ್ನ.

ರಾಯರು:— (ಏನೂ ಅರಿಯದವರಂತೆ) ಯಾರೋ ?

ವೆಂಕಣ್ಣಾ:— ಆ ಇವನರಿ. ಮೊನ್ನೆ ಮೊನ್ನೆ ೫೦೦೦ ರೂಪಾಯಿ ತೆಗೆದುಕೊಂಡು ಯಾರಿಗೂ ಮನಸ್ಸಿಗೆ ಬಾರದ ಹುಡುಗೆಯನ್ನು ಮದಿವಿ ಮಾಡಿಕೊಂಡನಲ್ಲರಿ.

ರಾಯರು:— ಮದಿವಿ ಮುಂದಿಗೆ ಅಲ್ಲ ತನಗ.

ಬಾಯರು:— ಅಯ್ಯ ಅವನಿಗಾದರೂ ಎಲ್ಲೆ ಮನಸ್ಸಿಗೆ ಬಂದsದ ಬಿಡಿರಿ.

ರಾಯರು:— ಅದು ಇರಲಿ. ಆದರೆ ನೀನು ಹೋದದ್ದಾದರೂ ಎಲ್ಲಿಗೆ ? ಯಾರ ಮನಿಗೆ ?

ವೆಂಕಣ್ಣ:— ಆ ಪಿಂಚಣಿ ಪಾಂಡುರಂಗರಾಯರ ಮನಿಗೆ ಹೋಗಿದ್ದೆ. ರಾಯರು ಬಹಳ ದೊಡ್ಡವರು. ದೇವರು ಬ್ರಾಹ್ಮಣರಲ್ಲಿ ಶ್ರದ್ಧಾ ಇದ್ದವರು ಅಂತ ಕೇಳಿದ್ದೆ. ಅದಕ್ಕೆ ಹೋದೆ. ಮತ್ತ ರಾಯರೆ, ಹೋಗಿ ನೋಡಿದರೆ ನನಗೂ ಖರೇನ ಅನ್ನಿಸಿತು.

ರಾಯರು:— ಏನು ಮನುಷ್ಯರು ಖರೇ ಅಂತಾ ಅನ್ನಿಸಿತೆ ?

ವೆಂಕಣ್ಣಾ:— ಅಲ್ಲ ರಾಯರ ! ಅವರ ವಿಷಯಕ್ಕೆ ಇದ್ದ ವಾರ್ತಾ ಖರೇ ಅನ್ನಿಸಿತು. ಅವರ ಮಾತು ಕೇಳಿ ಮರುಳ ಆದೆ

ರಾಯರು:— ಮಾತಿಗೆ ಮರುಳು ಆಗಿ ಮನಿ ಮರತರೊ ಏನೋ ?

ರಾಯರು:— (ವೆಂಕಣ್ಣನು ಏನೋ ಮಾತನಾಡಬೇಕು ಅನ್ನುವಷ್ಟರಲ್ಲಿ ) ಅದು ಇರಲಿ; ಆ ಪಾಂಡುರಂಗರಾಯರು ಎಷ್ಟು ಕೊಟ್ಟರು ಅದನ್ನೇ ಹೇಳಲಿಲ್ಲ.

ವೆಂಕಣ್ಣ:— ಅದನ್ನೇ ಹೇಳುವೆ. ರಾಯರು ಶ್ರದ್ಧಾ ಉಳ್ಳವರು ಅಂತ ಕೇಳಿದ್ದೆ. ಒಮ್ಮೆ ಅವರ ಕಡೆಗೆ ಹೋಗ ಬೇಕು ಅಂತ ಬಹಳ ದಿವಸದಿಂದಾನೂ ಇತ್ತು.

ರಾಯರು:— (ನಗೆಯಿಂದ) ಆದರೆ ಮಗಳು ದೊಡ್ಡವಳು ಆಗಲಿ ಅಂತ ಬಿಟ್ಟಿದ್ದಿ ಅಲ್ಲ !

ವೆಂಕಣ್ಣ:— ದೊಡ್ಡವರ ಮನೀ ಗುರುತು ಇಲ್ಲ, ಪರಿಚಯ ಇಲ್ಲ, ಏನಂತ ಹೋಗುವದು ಅಂತ ಮಾನಸೀಕ.

ಬಾಯರು:— (ನಡುವೆ) ಮನಸ್ಸಿಲ್ಲದಿದ್ದರೂ ಮಗಳಿಗಾಗಿ ಆದರೂ ಹೋಗಬೇಕು ಆಯಿತಲ್ಲ.

ವೆಂಕಣ್ಣ:— ( ನಿರಾಶೆಯಿಂದ ) ಏನು ಮಾಡುವದು. ಏನಾದರೂ ಮಾಡಿ ಮಗಳನ್ನು ಅನ್ನವಸ್ತ್ರ ಇದ್ದ ಮನಿಗೆ ಕೊಡಬೇಕು ಅಂತ ಇದೆ.

ಬಾಯರು:— ಕೊಡಲಿಕ್ಕೆ ನಾವು ಎಷ್ಟರವರು ಹೇಳಿರಿ! ವೆಂಕಣ್ಣಾಚಾರ, ಹೆಣ್ಣು ಹುಡುಗೆಯರು ತಮ್ಮ ನಶೀಬಾ ತಾವೇ ತೆಗೆದುಕೋಬೇಕು. ( ನೆನಪಾದವಳಂತೆ ) ನೋಡಿ ದರೋ ಇಲ್ಲೊ ಆ ವೆಂಕಟರಾಯರ ಕಮ್ಲಿನ್ನ ದೊಡ್ಡ ದೊಡ್ಡ ಶ್ರೀಮಂತರ ಮನಿ ಅಂತ ಕೊಟ್ಟರು. ಆದರೆ ಈಗ ಅದೆಲ್ಲಾ ಹಾಳಾಗಿ ಹೋಗಿರುವದು.

ವೆಂಕಣ್ಣ:— ಹೀಗೆ ತಿಳಿದುಕೊಂಡು ಸುಮ್ಮನೆ ಕೂಡ್ರು ವದು ಆದರೂ ಎಲ್ಲಿ ಆಗುವದು. ಮಾಡುವ ಪ್ರಯತ್ನ ವಂತೂ ಮಾಡಲೇಬೇಕು. ಮುಂದೆ ಪರಮಾತ್ಮ ಮಾಡಿ ಏನಸಿದ್ದು ಆಗುವದು.

ರಾಯರು:— (ಸಿಟ್ಟಿನಲ್ಲಿ) ಸಮ್ಮಂಧಿಲ್ಲದ್ದನ್ನೇ ಮಾತ ನಾಡುವಿರಿ. ಆ ಪಾಂಡುರಂಗರಾಯರು ಎಷ್ಟು ಕೊಟ್ರು ಅಂತಾ ನಾ ಕೇಳುತ್ತೇನೆ. ಅದನ್ನು ಹೇಳುವದು ಬಿಟ್ಟು ಏನನ್ನೋ ಮಾತನಾಡುವಿರಿ.

ಬಾಯರು:— (ಮನಸ್ಸಿಗೆ ಬಾರದೆ) ನಿಮ್ಮದನಕಾ ಸ್ವಲ್ಪೂ ಹೆಚ್ಚು ಕಡಿಮಿ ಆಗಬಾರದು, ಹೇಳ್ರಿ ಆಚಾರ, ಹೇಳ್ರಿ.

ವೆಂಕಣ್ಣ:— ಮುಂಜಾವಿನಲ್ಲಿ ಇಲ್ಲಿಂದ ಹೊರಟವನು ನೆಟ್ಟಗೆ ಆ ಪಾಂಡುರಂಗರಾಯರ ಮನೆಗೆ ಹೋದೆ. ರಾಯರು

ಅದೇ ತಮ್ಮ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಹೊರಗೆ ಬಂದು, ಅದೇ ಬಂದ ವರ್ತಮಾನಪತ್ರವನ್ನು ಓದುತ್ತ ಕುಳಿತಿದ್ದರು. ನಾನೂ ಹೋಗಿ ನಮಸ್ಕಾರವನ್ನು ಮಾಡಿದೆ. ಅವರು ತಿರುಗಿ ನನಗೆ ನಮಸ್ಕಾರಮಾಡಿ, ಯಾರು ನೀವು, ಅಂತಾ ಕೇಳಿದರು. ಅದಕ್ಕೆ ನಾನು–

ರಾಯರು:—(ಮದುವೆಯ) ಹೆಣ್ಣುಮಗಳ ತಂದಿ ಅಂತಾ ಹೇಳಿದೆಯೋ?

ವೆಂಕಂಣ:— ನಾನು ದೇಶಾವರೀ ಬ್ರಾಹ್ಮಣ, ಬಂದೀನಿ ಅಂತಾ ಹೇಳಿದೆ. ಹಾಗೆ ನಾನು ಹೇಳಿದ ಕೂಡಲೆ, ನೋಡಿರಿ ರಾಯರ, ಅವರು ಒಳ್ಳೇ ಆದರದಿಂದ ನನ್ನನ್ನು ಮೇಲೆ ಕರೆದು ಕುಳ್ಳಿರಿಸಿದರು. ಆಗ್ಯೆ ನನಗೆ ಅನ್ನಿಸಿತು, ರಾಯರು ಬಹಾಳ ಭಾವಿಕರು ಅಂತಾ ?

ರಾಯರು:—(ಉತ್ಸುಕತೆಯಿಂದ) ಮುಂದೆ?

ವೆಂಕಂಣ:— ಮುಂದೇನು ಅವರು ತೋರಿದ ಆದರದಿಂದ ದ್ವಿಗುಣಿತ ಉತ್ಸಾಹಿತನಾದ ನಾನು

ರಾಯರು:— (ನಗೆಯಿಂದ) ಮಗಳ ಮದುವೆಯು ಆಗಿಯೆ ಹೋಯಿತೆಂದು ತಿಳಿದೆನು.

ವೆಂಕಂಣ:—(ಇತ್ತ ಕಡೆಗೆ ಲಕ್ಷವಿಲ್ಲದವನಂತೆ) ದ್ವಿಗುಣಿತನಾದ ನಾನು “ ಪುನಸ್ತ್ವಾದಿತ್ಯಾ ರುದ್ರಾ ವಸವಸ್ಸಮಿಂದತಾಮುಪುನರ್ಬ್ರಹ್ಮಾಣೊ ವಸುನೀತಯಜ್ಞೈಃ ಪ್ರತೇನತ್ವಂ ತನ್ವಂ ವರ್ಧಯಸ್ವ ಸತ್ಯಾಸ್ಸಂತು ಯಜಮಾನಸ್ಯ ಕಾಮಾಃ॥

ಎಂದು ಮಂತ್ರವನ್ನು ಪ್ರಾರಂಭ ಮಾಡುವಂಥಾತನಾದೆನು, ಅಷ್ಟರಲ್ಲಿ ರಾಯರು ಎಂದರೆ ಪಾಂಡುರಂಗರಾಯರು ‘ ನಿಲ್ಲಿ

ಸ್ವಾಮಿ' ಎಂದು ಹೇಳಿ ಒಳಗೆ ಹೋಗಿ ಹೆಂಡರು ಮಕ್ಕಳನ್ನು ಕರೆತಂದು ನನಗೆ ನಮುಸ್ಕಾರ ಮಾಡಹೇಳಿ, ಅವರನ್ನು ಅಲ್ಲಿಯೇ ಕುಳ್ಳಿರಿಸಿಕೊಂಡರು.

ರಾಯರು:— ಆಗಂತೂ ನಿನಗೆ ಉತ್ಸಾಹದ ಅತಿರೇಕದಿಂದ ತಲೆ ಕೆಟ್ಟಿರಬೇಕಲ್ಲವೆ ?

ಬಾಯರು:— ಪೂರ್ಣ ಕೇಳಿಯಾದರೂ ಕೇಳಿರಿ. ಆ ಮೇಲೆ ಹೇಳುವಿರಂತೆ ಅವರಿಗೆ ಏನು ಆಗಿರಬೇಕು ಅಂಬುವದನ್ನು. ಇನ್ನೂ ಮುಂದೆ ಇರುವದು ಮೋಜು.

ವೆಂಕಂಣ:— (ತನ್ನನ್ನು ತಾನೆ ಮರೆತವನಾಗಿ) ದೀರ್ಘಾಯುತ್ವಾಯ ಬಲಾಯುವರ್ಚಸೆ

ರಾಯರು:— ಏ, ವೆಂಕಣ್ಣಾ ಏನೋ ಇದೊ ?

ವೆಂಕಂಣಾ:— ಅಲ್ಲ ರಾಯರೇ ಆ ಪಾಂಡುರಂಗರಾಯರ ಹೆಂಡರ ಮಕ್ಕಳು ಬಂದು ಕುಳಿತಮೇಲೆ ಮುಂದೆ ಸುರುವು ಮಾಡಿದೆ. ಅವರೆಲ್ಲರೂ ಏಕಚಿತ್ತದಿಂದ ಕುಳಿತು ಕೇಳುತ್ತಿದ್ದರು. " ದೀರ್ಘಾಯುತ್ವಾಯ ಬಲಾಯು ವರ್ಚಸೆ ಸುಪ್ರಜಾಸ್ತ್ವಾಯಚಾಸಹತೊ ಜೀವ ಶರದಃ ಶತಮ್ ॥" ಅವರ ಭಕ್ತಿ ಶ್ರದ್ಧೆಯನು ನೋಡಿ ಮುಂದೆ " ಏಷ ವೈ ಪ್ರತಿಷ್ಠಾನಾಮ ಯಜ್ಞೋ ಯತ್ರೈತೇನ ಯಜ್ಞೇನ ಯಜಂತೆ ಸರ್ವಮೇವ ಪ್ರತಿಷ್ಠಿತಮ್ ಭವತಿ । ಶತಮಾನಂ ಭವತಿ । ಶತಾಯುರ್ವೈ ಪುರುಷಸ್ಯತೇಂದ್ರಿಯ ಆವಿರೆವೇಂದ್ರಿಯಂ ವೀರ್ಯಮಾಮಂಧತೆ ॥ ಸ್ವಸ್ತಿ ಮಂತ್ರಾರ್ಥಾಃ ಸತ್ಯಾಃ ಸಂತು ॥ ಶ್ರೀ ಆರಾಧ್ಯದೇವತಾ ಸುಪ್ರಸನ್ನಾ ವರದಾ ಭವತು ॥

ಅವರ ಭಕ್ತಿ ಶ್ರದ್ಧೆಯನ್ನು ನೋಡಿ ಮುಂದೆ—

ರಾಯರು:— ಇಷ್ಟು ನಿನ್ನ ಮಂತ್ರ ಮುಗಿಯುವದರಲ್ಲಿ ನಿನ್ನ ಎದುರಿಗೆ ರೂಪಾಯಿಯ ರಾಶಿ ಬಿದ್ದಿರಬಹುದಲ್ಲ.

ವೆಂಕಂಣ:— ಇಷ್ಟು ಮುಗಿಯುವದರಲ್ಲಿ ಆ ಹೆಂಡರು ಮಕ್ಕಳು ನನಗೆ ಪುನಃ ನಮಸ್ಕಾರ ಮಾಡಿ ಒಳಗೆ ಹೋದರು.

ಬಾಯರು:— ಅದು ಇರಲಿ ಆಚಾರ್ಯರೆ; ಮುಂದಿನದನ್ನು ಹೇಳಿರಿ.

ರಾಯರು:— ಮುಂದಿನದನ್ನು ಏನು ಹೇಳುವದು. ಪಾಂಡುರಂಗರಾಯರು ವೆಂಕಂಣಾಚಾರ್ಯರಿಗೆ ಎಷ್ಟಾದರೂ ಹಣಾ ಕೊಟ್ಟಿರಲಿಕ್ಕೆ ಬೇಕಲ್ಲಾ.

ವೆಂಕಂಣಾ:— ಕೊಟ್ಟರು; ರಾಯರೊಬ್ಬರು; ಹಣವನಲ್ಲ ಆದರೆ ನಾಡಿದು ಬರ್ರಿ ಕೊಡುವೆ ಎಂದು 'ಆಶೀರ್ವಾದವನ್ನು'

(ರಾಯರು ಖೊಳ್ಳೆಂದು ನಗುವರು, ಬಾಯರು ಸಿಟ್ಟಿನಿಂದ ರಾಯರ ಕಡೆಗೆ, ಕನಿಕರದಿಂದ ಆಚಾರ್ಯರ ಕಡಿಗೆ, ಆಚಾರ್ಯರು ಭೂಮಿಯ ಕಡೆಗೆ ನೋಡುತ್ತಿರುವಾಗ ತೆರೆ)

*

# ಸಂಶೋಧನೆ

ಅವಳ ಮನೆಯನ್ನು ಹುಡುಕಲು ಬಲು ಉಬ್ಬು; ಆ ಉಬ್ಬಿನಿಂದಲೇ ಅಂದು ಊರನ್ನೆಲ್ಲಾ ಸುತ್ತಿದ್ದು. ರೇಲ್ವೆಯ ನಿಲ್ದಾಣದಿಂದ ಒಂದೆರಡು ಮೈಲು ಅಂತರದ ಮೇಲೆ—ಇದು ಒಂದು ದೊಡ್ಡ ನಗರದ ಉಪನಗರ (suburb). ಊರೇನೋ ಹಳೆಯ ತರಹದ್ದು. ಊರಲ್ಲಿ ದೊಡ್ಡ ಬೀದಿಗಳಿಲ್ಲ. ರೇಲ್ವೆಯ ನಿಲ್ದಾಣದಿಂದ ಊರ ಮಧ್ಯದಲ್ಲಿ ಹೋಗುವದು ಒಂದೇ ಒಂದು ರಾಜಬೀದಿ. ಸುಧಾರಣಾಯುಗದ ಸೌಕರ್ಯಗಳು ಅಲ್ಲಿ ಏನೂ ಕಂಗೊಳಿಸುತ್ತಿರಲಿಲ್ಲ. ಅಲ್ಲಲ್ಲಿ ಒಂದೆರಡು ವಿದ್ಯುದ್ದೀಪಗಳ ಕಂಬಗಳು ಮಾತ್ರ ಕಾಣಬರುತ್ತಿದ್ದವು. ಇಂತಹ ಸ್ಥಳದಲ್ಲಿ ಅವಳನ್ನು-ಅವಳ ಮನೆಯನ್ನು ಹುಡುಕುವದಾದರೂ ಹೇಗೆ? ನನಗೆ ಗೊತ್ತು ಇದ್ದುದು ಅವಳ ಗಂಡನ ಮನೆಯ ಹೆಸರು, ಅಡ್ಡ ಹೆಸರು. ಅದು ಒಂದು ಉಪನಗರವಾದರೂ (suburb) ಅಡ್ಡ ಹೆಸರಿನಿಂದ ಕೇಳಿದರೆ ಆಲ್ಲಿಯ ಜನರಿಗೆ ತಿಳಿದು ಬರುವಂತಿಲ್ಲ. ಒಂದೆರಡು ಕಡೆಯಲ್ಲಿ ಒಬ್ಬಿಬ್ಬರನ್ನು ಅವಳ ಗಂಡನ ಹೆಸರಿನಿಂದ ಕೇಳಿದೆ. ಆದರೆ ಯಾರಿಗೂ ತಿಳಿಯಲಿಲ್ಲ. ಆವರಲ್ಲಿ ಒಬ್ಬ ಮುದಕನು 'ಹಾರೋರ ಓಣ್ಯಾಗ ಹುಡಕರಿ ಎಪ್ಪಾ ಅಂದರೆ ಗೊತ್ತಾಕ್ಕೈತಿ, ಹಿಂಗೆಲ್ಲಾ ಕೇಳಿದರ ಗೊತ್ತಾಗಾಣಿಲ್ಲರಿ' ಎಂದು ನಮಗೆ (ಇದು ಬಹುಮಾನವ ಬಹುವಚನವಲ್ಲ-ನಮಗೆ ಎಂದರೆ

ನನಗೆ ಮತ್ತು ನನಗೆ ದಾರಿಗನಾಗಿ ಬಂದ ನನ್ನ ಓರ್ವ ಪರಿಚಯಸ್ತನಿಗೆ) 'ಹಾರೂರ ಓಣಿ'ಯ ದಾರಿಯನ್ನು ತೋರಿಸಿದ.

ಅವನು ಬ್ರಾಹ್ಮಣ ಕೇರಿಯ ದಾರಿಯನ್ನು ತೋರಿದನೇನೋ ನಿಜ. ಆದರೆ ಸಂದಿಗೊಂದಿಗಳಿಂದ ತುಂಬಿದ ಆ ಊರಲ್ಲಿ ಹಾಯ್ದು ಹೋಗುವಾಗ್ಗೆ ಅವನು ತೋರಿದ್ದು ಒಂದು ಸಂದಿಯು ಆಯಿತು, ನಾವು ಹಿಡಿದದ್ದು ಮತ್ತೊಂದು ಆಯಿತು. ಆ ಊರಲ್ಲಿಯ ಎಲ್ಲ ಸಂದಿಗಳನ್ನು ಸುತ್ತಿದ್ದು ಆಯಿತು. ಇಷ್ಟಾದರೂ ಬೇಸರಿಯದೆ ಮತ್ತೆ ಮತ್ತೆ ಸಂದಿಗಳನ್ನು ಸುತ್ತಿದೆವು. ತಗ್ಗು ದಿನ್ನೆಗಳಲ್ಲಿ ಅಲೆದಾಡಿದೆವು ಕೊನೆಗೆ ಬೇಸತ್ತು ಹಿಂದಿರುಗಬೇಕು ಅನ್ನುವಷ್ಟರಲ್ಲಿ ಯಾರೋ 'ಸಲಾಂ ಸಾಬ' ಎಂದ ಹಾಗೆ ಆಯಿತು. ಹಿಂತಿರುಗಿದೆ. ನನಗೆ 'ಸಲಾಂ' ಮಾಡಿದವನು ನಮ್ಮ ಊರಿನ ಅಂಚೇ ಜವಾನ. ಅವನನ್ನು ಕಂಡು ನನಗೆ ಹಿಡಿಸಲಾರದಷ್ಟು ಆನಂದವಾಯಿತು. ಅವಳ ಮನೆಯನ್ನು ಹುಡುಕಲು ಹೋಗಿ ಅಂಚೇ ಜವಾನನನ್ನು ಕಂಡರೆ ಆನಂದವು ಏಕೆ ಆಗಬೇಕು ಎಂಬ ಶಂಕೆಯು ಬರುವದು ನಿಜ, ಆದರೆ ಮುಳುಗುವವನಿಗೆ ನಡುನೀರಿನಲ್ಲಿ ಅಕಸ್ಮಾತ್ತಾಗಿ ಒಂದು ನೌಕೆಯ ಕಂಡರೆ ಎಷ್ಟು ಆನಂದವು ಆಗಬೇಕೋ ಅಷ್ಟು ಅದೇಕೆ ಅದರಕಿಂತಲೂ ಹತ್ತು ಪಟ್ಟು ಹೆಚ್ಚು ಆನಂದವು ಆಯಿತು, ನನಗೆ ಕಗ್ಗತ್ತಲೆಯಲ್ಲಿ ಅಡವಿಯಲ್ಲಿ ದಾರಿ ತಪ್ಪಿದವನಿಗೆ. ಮಿಣಿ ಮಿಣಿ ದೀಪವನ್ನು ಕಂಡು ಆಶಾಂಕುರವು ಚಿಗಿಯುವಂತೆ ನನ್ನ ಮನಸ್ಥಿತಿ ಆಯಿತು ಅಂಚೆಯ ಜವಾನನು ಎಂದರೆ ಪರಮಾತ್ಮನಿದ್ದಂತೆ. ಪರಮಾತ್ಮನಕಿಂತಲೂ ಮಿಗಿಲು ನಮ್ಮ ಅಂಚೇ ಜವಾನ. ಪರಮಾತ್ಮನಿಗೆ ಜನರ ಪಾಪ

ಪುಣ್ಯಗಳು, ಅಷ್ಟೇ ಗೊತ್ತಾಗುತ್ತವೆ. ಆದರೆ ನನ್ನ ಪರಮಾತ್ಮನಿಗೆ ಜನರ–ಎಲ್ಲ ಜನರ ಮನೆಗಳು ಗೊತ್ತಿರುತ್ತವೆ. ಈ ನಮ್ಮ ಪರಮಾತ್ಮನಲ್ಲಿ ಆ ಪರಮಾತ್ಮನಂತೆ ಉಚ್ಚನೀಚ ಭೇದಗಳಿಲ್ಲ. ಆ ಪರಮಾತ್ಮನ ಭೇದಬುದ್ಧಿಯ ಮೂರ್ತಿಮಂತ ಸಾಕ್ಷಿಗಳಾದ ಬಡವರೂ ಬಲ್ಲಿದರೂ ಎಲ್ಲರೂ ಒಂದೇ ನನ್ನ ಪರಮಾತ್ಮನಿಗೆ. ಇವನು ಎಲ್ಲರಲ್ಲಿ ಹೋಗುವನು. ಎಲ್ಲರನ್ನೂ ಒಂದೇ ತರದಿಂದ ಕಾಣುವನು. ಅಂಚೆಯ ಜವಾನನನ್ನು ಪರಮಾತ್ಮನೆಂದು ಕರೆಯಲು ಇನ್ನೂ ಒಂದು ಕಾರಣ. ಎಲ್ಲರೂ ಒಪ್ಪುವಂತಹ, ಒಪ್ಪಲೇ ಬೇಕಾದ ಕಾರಣ,ಸಂಕಟಸಮಯದಲ್ಲಿ ಸಕಲರ ಸಹಾಯಕ್ಕಾಗಿ ಧಾವಿಸಿ ಬರುವನು ಪರಮಾತ್ಮನು ಎಂದು ಒಂದು ಕಲ್ಪನೆ, ವಿಶ್ವಾಸ. ಆದರಂತೆಯೇ ನಮ್ಮ ಪರಮಾತ್ಮನು ನನ್ನ ಸಂಕಟ ಸಮಯದಲ್ಲಿ – ಅರಿಯದ ಸ್ಥಳದಲ್ಲಿ ಅರಿತವಳ ಸ್ಥಳವನ್ನು ಶೋಧಿಸುವ ಸಮಯದಲ್ಲಿ ಸಹಾಯಕನಾದನೆಂಬ ಕಲ್ಪನೆ ಬಂದಿತು ನನ್ನ ಮನದಲ್ಲಿ. ಈ ಕಲ್ಪನಾ ಸಾಮ್ರಾಜ್ಯವು ಅವನನ್ನು ಕೇಳಿದ ಕೂಡಲೇ ಕಳಚಿಬಿತ್ತು. ಅವನು ಸುತ್ತುಮುತ್ತಲಿನ ಹಳ್ಳಿಯಲ್ಲಿ ಪತ್ರಗಳನ್ನು ಹಂಚುವವ.

ಪರಮಾತ್ಮನು ಅನೇಕ ಅವತಾರಗಳನ್ನು ತಾಳುವನು ಎಂಬುದು ಸರ್ವ ಸಮ್ಮತವಾದುದು. ಅಂದಮೇಲೆ ನನ್ನ ಪರಮಾತ್ಮನೂ ಅವತಾರ ತಾಳಿದನು ಎಂದರೆ ನೀವು ನಂಬಬಹುದು; ನಂಬೇ ನಂಬುವಿರಿ ಎಂದು ನನ್ನ ಭರವಸೆ. ಅಂಚೇ ಜವಾನನಾದ ನನ್ನ ಪರಮಾತ್ಮನು ಈಗ ಅಗಸರವನ ಅವತಾರ ತಾಳಿದನು. ಎಲ್ಲರ ಮನೆಯ ಅರಿವೆಗಳನ್ನು ಒಗೆಯು

ವವ ಇವನು. ಪರಮಾತ್ಮನಲ್ಲಿ ವಿಶ್ವಾಸವಿಟ್ಟು ಜನರು ತಮ್ಮ ಹೊಲಸನ್ನು (ಅಪರಾಧಗಳನ್ನು) ಹೊರಗೆಡುವುವಂತೆ ಇವನಲ್ಲಿಯೆ ವಿಶ್ವಾಸ ಇಟ್ಟು ಜನರು ತಮ್ಮ ಹೊಲಸನ್ನು ಹೊರಗೆಡುವುವರು ಎಂದರೆ ಹಸನ ಮಾಡಲು ಒಪ್ಪಿಸುವರು. ನನ್ನ ಸಂಶೋಧನೆಯ ಕಾರ್ಯದಲ್ಲಿ-ಶ್ರೀರಾಮನ ಹನುಮಂತನಂತೆ ಸಿದ್ಧನಾದ ನನ್ನ ಪರಿಚಯಸ್ಥನು ಈ ಪರಮಾತ್ಮನನ್ನು ಮೊರೆ ಹೊಕ್ಕನು. ಏಕೆಂದರೆ ಈ ಪರಮಾತ್ಮನು ಅವನು ಮನೆಯ ಅಗಸ. ಇವನಿಂದಲೂ ನಮಗೆ ಸಹಾಯ ದೊರೆಯಲಿಲ್ಲ.

ಇಷ್ಟು ಕಷ್ಟ ಪಟ್ಟು ಹುಡುಕುವ ಈ 'ಅವಳು' ಯಾರು ಎಂಬ ವಿಚಾರದಲ್ಲಿ ಮುಳುಗಿರಬಹುದು ನೀವು; ಈ ಅವಳು ನನ್ನ ಬಾಲ್ಯದ ಗೆಳತಿ ಚಿಕ್ಕಂದಿನಲ್ಲಿ ನಾವಿಬ್ಬರೂ ಒಂದೇ ಊರಲ್ಲಿ, ಒಂದೇ ಸ್ಥಳದಲ್ಲಿ ಕೂಡಿ ಆಡಿದವರು, ನಕ್ಕು ನಲಿದವರು; ತಿಂದು ತೇಗಿದವರು. ಬಾಲ್ಯದ ಗೆಳೆತನ ಮುಂಜಾವಿನ ಅಭ್ಯಾಸದಂತೆ ಬಹು ದಿನ ಉಳಿಯುವದು. ಅದಕ್ಕೆಂದೇ ಇಷ್ಟು ದಿವಸಗಳಾದರೂ ಅವಳನ್ನು, ಅವಳ ಗೆಳೆತನವನ್ನು ನಾನು ಮರೆತಿಲ್ಲ. ಎಷ್ಟು ಸ್ನೇಹವಿದ್ದರೂ ಹುಡುಗೆಯರು ದೊಡ್ಡವರಾದ ಮೇಲೆ ಅವರನ್ನು ಮಾತನಾಡಿಸುವದು ನಮ್ಮಲ್ಲಿ ಸಾಧ್ಯವೂ ಅಲ್ಲ, ಇಷ್ಟವೂ ಅಲ್ಲ. ನಮ್ಮಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಯಾರಿಗೂ ಇದು ಇಷ್ಟ ಅಲ್ಲ ಎನ್ನಿಸದಿರದು. ಮಗನು ದೊಡ್ಡವನಾದ ಮೇಲೆ ತಾಯಿಯ ಹತ್ತಿರ ಕೂತು ಮಾತನಾಡುವದು ಸರಿಯಲ್ಲ ಎಂದು ಒಮ್ಮೆ ನನ್ನ ಸೋದರಮಾವನು ಅಂದದ್ದು

ನನ್ನ ಜ್ಞಾಪಕದಲ್ಲಿ ಇದೆ. ಹೆತ್ತ ತಾಯಿಯ ಕೂಡ ಮಾತನಾಡುವದು ಸರಿಯಲ್ಲ ಎಂದು ಸಾರುವ ನಮ್ಮ ಸಮಾಜದಲ್ಲಿ ಪರಕೀಯಳ ಸಂಗಡ ಮಾತನಾಡುವದು ನ್ಯಾಯವಾದೀತೇ ? ಇಲ್ಲ, ಇಲ್ಲ, ಎಂದಿಗೂ ಇಲ್ಲ ಗಂಡಸು ಹೆಂಗಸು ಒಂದೆಡೆ ಸೇರಿ ಮಾತನಾಡುವದನ್ನು ಕಂಡರೆ ಕೆಟ್ಟ ಕಲ್ಪನೆಗಳಷ್ಟೇ ತಲೆದೋರುವವು. ಕೆಟ್ಟ ವಿಚಾರಗಳು ಬರುವದೂ ತಪ್ಪಲ್ಲ. ಏಕೆಂದರೆ ಹೆಂಗಸು ಗಂಡಸಿನ ದಾಸಿ.

'ಅವಳನ್ನು' ಎಷ್ಟೋ ಸಲ ಇದಕ್ಕೂ ಮುಂಚೆ ನಾನು ನೋಡಿದ್ದೆ. ಅವಳೊಡನೆ ಮಾತನಾಡಿದರೆ ಅವಳಿಗೆ ಕೆಟ್ಟ ಹೆಸರು ಬಂದೀತು ಎಂಬ ವಿಚಾರದಿಂದ ಅವಳನ್ನು ಮಾತನಾಡಿಸುವ ಧೈರ್ಯಮಾಡಿದ್ದಲ್ಲ ನಾನು. ಮಾತನಾಡಿಸುವ ಧೈರ್ಯವಿಲ್ಲದವನು ಅವಳ ಮನೆಯನ್ನು ಹುಡುಕುವದು ಸೋಜಿಗ ಎನ್ನಿಸಬಹುದು. ಅವಳು ಮೊನ್ನೆಯ ಬಿಡುವಿನಲ್ಲಿ ತನ್ನ ತವರೂರಿಗೆ ಬಂದಿದ್ದಿಲ್ಲವಾದರೆ ನಾನಾದರೂ ಅವಳ ಮನೆಯನ್ನು ಹುಡುಕುತ್ತಿರಲಿಲ್ಲ. ಅಲ್ಲಿ ಬಂದಾಗ್ಗೆ ಅವಳು ನಮ್ಮ ಮನೆಗೆ ಬರುವ ವಾಡಿಕೆಯಂತೆ ಈ ಸಲವೂ ಬಂದಳು. ಅವಳು ಬಂದಾಗ್ಗೆ ನಾನು ಮನೆಯಲ್ಲಿಯೇ ಇದ್ದೆ. ನಾನು ಅವಳನ್ನು ನೋಡಿದೆ. ಅವಳೂ ನನ್ನನ್ನು ನೋಡಿದಳು. ಆದರೂ ನಾನು ಅವಳನ್ನು ಮಾತನಾಡಿಸಲಿಲ್ಲ. ಅವಳು ಮಾತ್ರ ಮುಗುಳ್ನಗೆಯಿಂದ 'ಈಗೇನಪಾ ದೊಡ್ಡವ ಆಗಿರುವಿ, ನನ್ನನ್ನು ಏಕೆ ಮಾತನಾಡಿಸುವೆ' ಎಂದು ಅಂದಳು. ನನಗೆ ಏನು ಉತ್ತರ ಕೊಡಬೇಕು ಎಂಬದು ತೋಚದಾಯಿತು. ಆದರೂ 'ನೀನೇ ಮಾತನಾಡುವಿಯೋ

ಇಲ್ಲೋ ಎಂದು ಸುಮ್ಮನಿದ್ದೆ' ಎಂದೆ. ಮುಂದೆ ಬಹಳ ಹೊತ್ತಿನವರೆಗೆ ನಮ್ಮ ಬಾಲ್ಯವನ್ನು ನೆನೆದು ಮಾತನಾಡಿದೆವು. ಅವಳು ತನ್ನ ಮಗನಿಗೆ 'ನಿನ್ನ ಮಾಮಾ' ಎಂದು ನನ್ನನ್ನು introduce ಮಾಡಿದಳು. ಕೊನೆಗೆ ಅವಳು 'ನಮ್ಮೂರಿಗೆ ಬಂದಾಗ್ಗ ನಮ್ಮ ಮನೆಗೆ ಬರುವೆಯಾ' ಎಂದಳು. 'ನಿಮ್ಮ ಮನೆಯವರಿಗೆ ವಿಪರೀತ ಕಲ್ಪನೆ ಬರದಿದ್ದರೆ ಬರುವೆನು' ಎಂದೆ 'ಇಲ್ಲ ಬಾ' ಎಂದಳು. ಹೂ ಎಂದು ವಚನವನ್ನಿತ್ತೆ.

ಅಂದಿನ ಆ ವಚನವನ್ನು ಪಾಲಿಸುವದಕ್ಕೋಸ್ಕರ ನಾನು ಇಂದು ಸಂದಿಗೊಂದಿಗಳಲ್ಲಿ 'ತಗ್ಗು ದಿನ್ನೆಗಳಲ್ಲಿ ಅಲೆಯುತ್ತಿರುವದು.' ಯಾವ ನಮ್ಮ ದೇಶದಲ್ಲಿ ವಚನ ಪಾಲಿಸುವದಕ್ಕಾಗಿ ಹೆಂಡತಿಯನ್ನು ಮಾರಿಕೊಂಡ ಹರಿಶ್ಚಂದ್ರನು ಜನ್ಮ ತಾಳಿದನೋ, ಯಾವ ನಮ್ಮ ದೇಶದಲ್ಲಿ ಪಿತೃ ವಾಕ್ಯಪರಿಪಾಲನೆಗಾಗಿ ಅಡಿವೆಯನ್ನು ಸೇರಿದ ಶ್ರೀರಾಮಚಂದ್ರನು ಜನ್ಮ ತಾಳಿದನೋ ಅದೇ ದೇಶದಲ್ಲಿ, ಕೊಟ್ಟ ವಚನ ಪಾಲಿಸುವದಕ್ಕಾಗಿ ನಾನು ಸಂದಿಗೊಂದಿಗಳನ್ನು ತಗ್ಗು ದಿನ್ನೆಗಳನ್ನು ಸುತ್ತಿದ್ದು ಅಚ್ಚರಿಯಲ್ಲ.

× × × ×

ಎಲ್ಲ ಕಡೆಯಲ್ಲಿಯೂ ಹುಡುಕಿ ಬೇಸತ್ತು ಯಾವುದೋ ಒಂದು ಸಂದಿಯನ್ನು ಹಿಡಿದು ಹಿಂತಿರುಗಿದೆವು. ಸ್ವಲ್ಪ ದೂರು ಹೋಗುವದರಲ್ಲಿ 'ಮಾಮಾ, ಏ ಮಾಮಾ' ಎಂಬ ಕೂಗು ಕೇಳ ಬಂತು. ಹಿಂತಿರುಗಿ ನೋಡಿದೆ ಅವಳ ಮಗು.

# ರಂಗವುಂಗ ರಂಜನೋದ್ಯಾನ

●

“ ಇದೇನು ವಿಚಿತ್ರ ಹೆಸರು ” ಎಂದು ಕೇಳಿದವರು ಕೆಲರು; “ ಬರಿಯೆ ಹುಡುಗಾಟಕ್ಕೆ ನಿಂತಂತೆ ಕಾಣುತ್ತದೆ ” ಎಂದು ಪಿಸುಗುಟ್ಟಿದವರು ಹಲರು. ತಮತಮಗೆ ತಿಳಿದಂತೆ ಮಾತನಾಡುವರು ಜನರು. ನಮ್ಮ ಮನಸ್ಸಿನಲ್ಲಿಯದನ್ನು ಹೇಳುವೆವು.

ಮನೋರಂಜನೆಯು ನಮ್ಮ ಉದ್ಯಾನದ ಮೂಲ, ತಳಹದಿ. 'ರಂಗ' ತನದಲ್ಲಿ ರಂಜನೆಯಿದೆ. 'ಮಂಗ'ತನದಲ್ಲಿ ಮೋಜು ಇದೆ. ಮಂಗತನವು ಹುಡುಗಾಟವನ್ನು ಸೂಚಿಸಬಹುದು. ಹುಡುಗರಿದ್ದಾಗ ಹಿರಿತನದ ಹೆಮ್ಮೆಯ ಮಾತು ಬೇಡ. ಮಾನವನು ಸದಾ ಹುಡುಗನಾಗಿರಬೇಕೆಂದೇ ಬಯಸುತ್ತಾನೆ. ಹುಡುಗತನವೆ—ಯೌವನವೆ, ಆನಂದದ ಝರಿ.

ಸುಖವಿದ್ದೆಡೆ ಆನಂದವು ಸುಳಿವುದು. ಸುಖವು ಸಿಕ್ಕ ಬೇಕಾದರೆ ವಾತಾವರಣವನ್ನು ಪರೀಕ್ಷಿಸಬೇಕಾಗುವುದು.—ಅದುವೆ ನಮ್ಮ ಸಮಾಜ. ನಮ್ಮ ಸಮಾಜದ ಸ್ಥಿತಿಗತಿಗಳನ್ನು ಅಭ್ಯಸಿಸಿ, ಅಲ್ಲಿ ಕಂಡು ಬರುವ ದುಃಖ ಮೂಲಗಳನ್ನು ತಿಳಿದು ಅವುಗಳನ್ನು ತೊಡೆದೊಗೆಯಬಹುದೇ ಎಂದು ವಿಚಾರಿಸಿ, ಈ ಪ್ರಯತ್ನವನ್ನು ಮಾಡಿದ್ದೇವೆ. ಯಾರೊಬ್ಬರ ಟೀಕೆ ಮಾಡಿ ಸಮಾಧಾನ ಹೊಂದುವ ವಿಚಾರವಿಲ್ಲ. ಸಮಾಜೋನ್ನತಿಗಾಗಿ ಹಲವಾರು ಬಗೆಯಿಂದ ಜನರು ಪ್ರಯತ್ನಮಾಡುತ್ತಿರುವುದು ಕಂಡು ಬರುವುದು. ನಮ್ಮದೂ ಒಂದು ದೃಷ್ಟಿ. ನಮ್ಮ ದೃಷ್ಟಿಯಿಂದ ಕೆಲವು ಹಂಚಿಕೆಗಳನ್ನು ಸಿದ್ಧಪಡಿಸಿ, ಅವುಗಳನ್ನು ಪಾಲಿಸುತ್ತಲಿದ್ದೇವೆ. ಕಾಲವು ಗತಿಸುವಂತೆ ಅನುಭವ ಬಂದು ಅವುಗಳಿಗನುಗುಣವಾಗಿ ನಮ್ಮ ರೀತಿ ನೀತಿಗಳಲ್ಲಿ ಬದಲಾವಣೆಗಳಾಗಬಹುದು. ಯಾವುದೊಂದು ವಿಷಯವು ಪರಿಪೂರ್ಣವಲ್ಲ. ಪರಿಪೂರ್ಣತೆಯು ಈ ಜಗತ್ತಿನ ಅಂತವು. ಅಲ್ಲಿಯವರೆಗೆ ಮಾಡಿದ ಪ್ರಯತ್ನಗಳಿಗೆ ಅಸಮಾಧಾನವು ಕಾಣುವುದು. ಅಸಮಾಧಾನವೆ ಪ್ರಗತಿಯ ಮೂಲ. ಈ ವಿಚಾರದ ಮೇರೆಗೆ ಸಾಗಹತ್ತಿದ್ದೇವೆ.

ಹೆಸರಿನ ಬಗ್ಗೆ ಹುರಿದಾಡಿದವರು ಕೆಲರು. ಹೆಸರು ಇಂತಹದೆ ಇರಬೇಕೆಂದು ಯಾರೂ ನಿರ್ಧರಿಸಲಾರರು. ಈ ಹೆಸರು ನಮಗೆ ಮೋಜೆನಿಸಿದುದರಿಂದ ಇದನ್ನೆ ಸ್ವೀಕರಿಸಿದ್ದೇವೆ.

ರಂಜನೋದ್ಯಾನದಿಂದ ಮತ್ತೊಂದು ಗುರಿ ಸಾಧಿಸಬೇಕಾಗಿದೆ. ಇಂದು ನಮ್ಮಲ್ಲಿ ಪ್ರವಾಸ ಸಾಹಿತ್ಯವಿಲ್ಲ ಯಾವ ರೇಲ್ವೆನಿಲ್ದಾಣದಲ್ಲಿಯೂ ಕನ್ನಡ ಪುಸ್ತಕಗಳು ಕಾಣುವುದಿಲ್ಲ. ಆ ಕೊರತೆಯನ್ನು ಹೋಗಲಾಡಿಸಲು ಈ ಪ್ರಯತ್ನ. ಇವುಗಳ ಬೆಲೆ ನಾಲ್ಕಾಣೆ. ಹಿಡಿತದಲ್ಲಿ ಓದತೊಡಗಿದರೆ ೧ ಗಂಟೆಯಲ್ಲಿ ಮುಗಿಯುವುದು. ಗಾಡಿಯಲ್ಲಿ ಓದಲು ಅನುಕೂಲ. ಈ ದೃಷ್ಟಿಯಿಂದ ನಾವು ಪುಸ್ತಕ ಮಾಲೆ ಪ್ರಾರಂಭಿಸಿರುತ್ತೇವೆ. ಮತ್ತು ರೇಲ್ವೆ ಪುಸ್ತಕಾಲಯ 'ಹಿಗ್ಗಿನ ಬೊಥಮ್ಸ'—ದವರ ಸಂಗಡ ಪತ್ರವ್ಯವಹಾರ ನಡೆದಿದೆ. ಸ್ವಲ್ಪದಿನಗಳಲ್ಲಿಯೆ ಎಲ್ಲ ರೇಲ್ವೆ ನಿಲ್ದಾಣಗಳಲ್ಲಿ "ಕನ್ನಡ" ಪುಸ್ತಕಗಳನ್ನು ಕಾಣಬಹುದು.

ರಂಜನೋದ್ಯಾನದ ಬಗೆಗೆ ಹೆಚ್ಚು ಹೇಳಬೇಕಿಲ್ಲ. ಈಗಾಗಲೆ ಅಲ್ಲಲ್ಲಿಂದ ಬಂದ ಅಭಿಪ್ರಾಯಗಳು ಉತ್ತೇಜನಕಾರಿಯಾಗಿವೆ. ಕೆಲಸ ಮಾಡುವವರಿಗೆ ಹೆಚ್ಚಿಗೇನು ಬೇಕು.

| | |
|---|---|
| ೧೫—೯—೪೯<br>'ಶಾಂತಿಕುಟೀರ'<br>ರಂಗಮಂಗ ಪ್ರಕಾಶನ<br>ಧಾರವಾಡ | **ರಂಗಮಂಗ ರಂಜನೋದ್ಯಾನದ**<br>ಒಡೆಯರು |

# ರಂಗ-ಮಂಗ ಪ್ರಕಾಶನದಲ್ಲಿಯ

## ಗೊಂಚಲಗಳು.

●

| | | | |
|---|---|---|---|
| ೧ | ಕನ್ನಡಕ | 'ಅರುಣ' | ೦-೪-೦ |
| ೨ | ಬಹಿಷ್ಕಾರ | 'ನೆರಂಗ' | ೦-೪-೦ |
| ೩ | ತಾಪತ್ರಯ | 'ಜೋಕೆ' | ೦-೪-೦ |
| ೪ | ಕನ್ನಡಿ | 'ಮೊರಬ' | (ಅಚ್ಚಿನಲ್ಲಿ) |
| ೫ | ತುಷಾರ | 'ಎನ್ಕೆ' | (ಪಡಿಯಚ್ಚಿನಲ್ಲಿ) |

●

"ಶ್ರೀರಂಗಜೀವನ"ವು
ಈ ವರುಷದ ಬಿಡಿ ಹೂ.
ಡಿಸೆಂಬರ ಮೊದಲ ವಾರದಲ್ಲಿ ಪ್ರಕಟವಾಗುವುದು.

—ಒಡೆಯರು
ರಂಗ-ಮಂಗ ರಂಜನೋದ್ಯಾನ
ಧಾರವಾಡ

---

ಪ್ರತಿಗಳು :

ಕರ್ನಾಟಕ ಬುಕ್‌ಡಿಪೊ,
ಗಾಂಧಿಚೌಕ, ಧಾರವಾಡ
ಇಲ್ಲಿ ದೊರೆಯುವವು